# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಮೇ 11, 2023

ಸಂಪುಟ : 49 ಸಂಚಿಕೆ : 359 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಭವಿಷ್ಯ ನಿರ್ಧರಿಸಿದ ಮತದಾರ

## ಸಣ್ಣ ಪುಟ್ಟ ಘಟನೆಗಳ ಹೊರತುಪಡಿಸಿ ಎಲ್ಲೆಡೆ ಶಾಂತಿಯುತ ಮತದಾನ

ಬೆಂಗಳೂರು, ಮೇ 10 - ಕರ್ನಾಟಕದಲ್ಲಿ ಹೊಸ ಸರ್ಕಾರ ರಚನೆಗೆ ರಾಜ್ಯದ ಮತದಾರರು ಬುಧವಾರ ಭವಿಷ್ಯ ಬರೆದಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಇಂದು ಏಕ ಕಾಲದಲ್ಲಿ ನಡೆದ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ, ಶಾಂತಿಯುತವಾಗಿ ಮತದಾನ ನಡೆಯಿತು.

ಒಂದೆಡೆ ರಾಜಕೀಯ ಪಕ್ಷಗಳ ಅಬ್ಬರ ಮತ್ತೊಂದೆಡೆ ಕೇಂದ್ರ ಚುನಾವಣಾ ಆಯೋಗ ಮತದಾನಕ್ಕೆ ಪ್ರೋತ್ಸಾಹ ನೀಡಿದ ಹಿನ್ನೆಲೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಒಟ್ಟಾರೆ ಶೇಕಡ 71.77 ರಷ್ಟು ಮತದಾನವಾಗಿದ್ದು, ಕಳೆದ ಬಾರಿಗಿಂತ ಶೇಕಡವಾರಿನಲ್ಲಿ ಮತದಾನದ ಪ್ರಮಾಣ ಹೆಚ್ಚಿದೆ. ಬಳ್ಳಾರಿ ಗ್ರಾಮಾಂತರದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳ ನಡುವೆ ನಡೆದ ಗಲಭೆ ಮತ್ತು ಕಲ್ಲು ತೂರಾಟದಿಂದ ಒಬ್ಬರು ಗಾಯಗೊಂಡಿದ್ದಾರೆ.

ಇದನ್ನು ಹೊರತು ಪಡಿಸಿದರೆ, ದೊಡ್ಡ ಪ್ರಮಾಣದಲ್ಲಿ ಅಹಿತಕರ ಘಟನೆ ಜರುಗಿಲ್ಲ. ಆದರೆ ಮತದಾನ ಮಾಡಲು ಬಂದವರು, ಮತ ಹಾಕಿ ಹೋದ ನಂತರ ಇಬ್ಬರು ಸಾವನ್ನಪ್ಪಿದ್ದಾರೆ.

ಒಬ್ಬರು ಮತ ಗಟ್ಟೆಯಲ್ಲೇ ಕೊನೆಯುಸಿರೆಳೆದ ಘಟನೆ ಜರುಗಿದೆ. ರಾಜ್ಯದ ಕೆಲವೆಡೆ ವಧು-ವರರು ಮದುವೆ ಮುಗಿಯುತ್ತಿದ್ದಂತೆ ಮತದಾನ ಮಾಡಿ, ತಮ್ಮ ಹಕ್ಕು (3ನೇ ಪುಟಕ್ಕೆ)



# ಜಿಲ್ಲೆಯಲ್ಲಿ ಶೇ.77.20ರಷ್ಟು ಮತದಾನ

**ದಾವಣಗೆರೆ, ಮೇ 10- ಜಿಲ್ಲೆಯಲ್ಲಿ ಶಾಂತಿಯುತ ಮತದಾನ ನಡೆದಿದ್ದು, ಶೇ. 77.20 ರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಕಳೆದ ಬಾರಿ ಶೇ.75.59 ರಷ್ಟು ಮತದಾನವಾಗಿದ್ದರೆ, 2013ರ ವಿಧಾನಸಭಾ ಚುನಾವಣೆಯಲ್ಲಿ ಶೇ.75.98ರಷ್ಟು ಮತದಾನವಾಗಿತ್ತು.**

ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಯಿತು. ಇದಕ್ಕೂ ಮುನ್ನ ಮತಗಟ್ಟೆಗಳಲ್ಲಿ ಅಣಕು ಮತದಾನ ನಡೆಯಿತು. ಬೆಳಿಗ್ಗೆಯಿಂದಲೇ ಮತದಾರರು ಸರದಿ ಸಾಲಿನಲ್ಲಿ ನಿಂತು ಹುರುಪಿನಿಂದ ಮತ ಚಲಾಯಿಸಿದರು. ಕೆಲವರು ಕಾರ್ಡ್ ಇದ್ದರೂ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ ಎಂಬ ಕಾರಣಕ್ಕೆ ನಿರಾಶೆಯಿಂದ ಮನೆ ಕಡೆ ಹೆಜ್ಜೆ ಹಾಕಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ 7,21,964 ಪುರುಷ, 7,20,004 ಮಹಿಳೆಯರು, 118 ಇತರೆ ಸೇರಿ 14,42,086 ಮತದಾರರಲ್ಲಿ 5,64,256 ಪುರುಷ, 5,49,115 ಮಹಿಳೆಯರು ಹಾಗೂ 23 ಇತರೆ ಮತದಾರರು ಸೇರಿ ಒಟ್ಟು 11,13,394 ಜನರು ಮತದಾನ ಮಾಡಿದ್ದಾರೆ.

ಜಗಳೂರು ಕ್ಷೇತ್ರದಲ್ಲಿ ಶೇ.80.17, ಹರಿಹರ ಶೇ.79.78, ದಾವಣಗೆರೆ ಉತ್ತರ ಶೇ.67.49, ದಾವಣಗೆರೆ ದಕ್ಷಿಣ ಶೇ. 66.32, ಮಾಯಕೊಂಡ (2ನೇ ಪುಟಕ್ಕೆ)

**ಹೊನ್ನಾಳಿ ಕ್ಷೇತ್ರದಲ್ಲಿ ಅತಿ ಹೆಚ್ಚು ಶೇ.83.78**
**ದಾವಣಗೆರೆ ದಕ್ಷಿಣದಲ್ಲಿ ಅತಿ ಕಡಿಮೆ ಶೇ.66.32 ಮತದಾನ**

### ಮೇ 13ರತ್ತ ಎಲ್ಲರ ಚಿತ್ತ

**ಜಿಲ್ಲೆಯಲ್ಲಿ ಮತದಾನ ಮುಕ್ತಾಯವಾಗಿದ್ದು ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಮತಯಂತ್ರಗಳಲ್ಲಿ ಭದ್ರವಾಗಿದೆ. ಎಲ್ಲರ ಚಿತ್ತ ಮೇ 13 ರಂದು ನಡೆಯುವ ಮತ ಎಣಿಕೆಯತ್ತ ನೆಟ್ಟಿದೆ. ಜಯದ ಮಾಲೆ ಯಾರ ಪಾಲಾಗಲಿದೆ ಎಂಬ ನಿರೀಕ್ಷೆ ಮತದಾರ ಪ್ರಭುಗಳದ್ದಾಗಿದೆ.**


## ಹೃದಯಪೂರ್ವಕ ಕೃತಜ್ಞತೆಗಳು



ದಿನಾಂಕ 10-5-2023 ರಂದು ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ನಮಗೆ ಮತ ನೀಡಿದ ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳ ಎಲ್ಲಾ ಮತದಾರರಿಗೆ

**ಹೃತ್ಪೂರ್ವಕ ಕೃತಜ್ಞತೆಗಳು.**

ಚುನಾವಣೆಯಲ್ಲಿ ನಮ್ಮ ಪರವಾಗಿ ಹಗಲಿರುಳು ಶ್ರಮಿಸಿದ, ಮತಯಾಚಿಸಿದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರುಗಳಿಗೆ, ಪದಾಧಿಕಾರಿಗಳಿಗೆ, ಮಹಾನಗರ ಪಾಲಿಕೆ ಸದಸ್ಯರುಗಳಿಗೆ, ಅಭಿಮಾನಿ-ಹಿತೈಷಿಗಳಿಗೆ, ಸ್ನೇಹಿತರು-ಬಂಧುಗಳಿಗೆ ಅನಂತಾನಂತ ಧನ್ಯವಾದಗಳು.

**ಶ್ರೀ ಶಾಮನೂರು ಶಿವಶಂಕರಪ್ಪ**
ಕಾಂಗ್ರೆಸ್ ಅಭ್ಯರ್ಥಿ, ದಾವಣಗೆರೆ ದಕ್ಷಿಣ ಕ್ಷೇತ್ರ

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**
ಕಾಂಗ್ರೆಸ್ ಅಭ್ಯರ್ಥಿ, ದಾವಣಗೆರೆ ಉತ್ತರ ಕ್ಷೇತ್ರ


## ಬಿಎಲ್‌ಓ ಅಮಾನತ್ತು : ಡಿಸಿ

ದಾವಣಗೆರೆ, ಮೇ 10- ಚನ್ನಗಿರಿ ತಾಲ್ಲೂಕಿನ ಜಮ್ಮಾಪುರ ಸಣ್ಣತಾಂಡಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಹಾಗೂ ಬಿ. ಎಲ್.ಓ ಆಗಿದ್ದ ಎಂ.ಡಿ. ಬಸವರಾಜ್ ಅವರನ್ನು ಚುನಾವಣಾ ಕರ್ತವ್ಯಲೋಪ, ಸರ್ಕಾರಿ ನೌಕರನಿಗೆ ತರವಲ್ಲದ ನಡತೆ ಆಧಾರದ ಮೇಲೆ ಸೇವೆಯಿಂದ ಅಮಾನತ್ತು ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

109.ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಯೊಬ್ಬರ ಜೊತೆಗೆ ಪ್ರಚಾರದ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಬಗ್ಗೆ ದೂರು ಸ್ವೀಕರಿಸಲಾಗಿತ್ತು. ಈ ಬಗ್ಗೆ ಕಾರಣ ಕೇಳಿ (4ನೇ ಪುಟಕ್ಕೆ)

## ಮತಗಟ್ಟೆಯಲ್ಲೇ ಸಹಜ ಹೆರಿಗೆ

ಕುರುಗೋಡು, ಮೇ 10 - ಮತದಾನ ಮಾಡಲು ಆಗಮಿಸಿದ್ದ ತುಂಬು ಗರ್ಭಿಣಿಗೆ ಕೇಂದ್ರದಲ್ಲಿಯೇ ಸಹಜ ಹೆರಿಗೆಯಾದ ಅಪರೂಪದ ಘಟನೆ ಬಳ್ಳಾರಿಯ ಕುರುಗೋಡು ತಾಲ್ಲೂಕಿನ ಕೊರ್ಲಗುಂದಿ ಗ್ರಾಮದ ಮತಗಟ್ಟೆಯಲ್ಲಿ ನಡೆದಿದೆ.

ಗ್ರಾಮದ (4ನೇ ಪುಟಕ್ಕೆ)

## ಮತಗಟ್ಟೆ ಆವರಣದಲ್ಲೇ ಇಬ್ಬರ ಸಾವು

ಬೆಂಗಳೂರು, ಮೇ 10 - ಮತದಾನಕ್ಕಾಗಿ ಬಂದಿದ್ದ ಇಬ್ಬರು ಮತಗಟ್ಟೆ ಆವರಣದಲ್ಲೇ ಸಾವನ್ನಪ್ಪಿರುವ ಪ್ರತ್ಯೇಕ ಘಟನೆಗಳು ನಡೆದಿವೆ.

ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮ ಕ್ಷೇತ್ರ ವ್ಯಾಪ್ತಿಯ ಯರಝರ್ವಿ ಗ್ರಾಮದಲ್ಲಿ 70 ವರ್ಷದ ಪಾರವ್ವ ಸಿದ್ನಾಳ ಮತದಾನಕ್ಕೂ ಮುನ್ನ ಮತಗಟ್ಟೆ ಆವರಣದಲ್ಲಿ (4ನೇ ಪುಟಕ್ಕೆ)


॥ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥

## ಗುರು ಲಿಂಗ ಜಂಗಮಾರಾಧನೆ ಆಹ್ವಾನ ಪತ್ರಿಕೆ

ನರಗನಹಳ್ಳಿ ಮಠದ ವಂಶಸ್ಥರು ಹಾಗೂ ದಾವಣಗೆರೆ ವಾಸಿಗಳಾದ
**ಶ್ರೀಮತಿ ಸವಿತಾ ಮತ್ತು ಶ್ರೀ ಎನ್.ಎ. ಮುರುಗೇಶ್**
ಅಧ್ಯಕ್ಷರು, ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 7-5-2023ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ



**ಶ್ರೀಮತಿ ಲಲಿತಮ್ಮನವರು**
(ಲಿಂ॥ ಎನ್.ಎಂ.ಜೆ.ಬಿ. ಆರಾಧ್ಯ ಇವರ ಧರ್ಮಪತ್ನಿ)
ಲಿಂಗೈಕ್ಯರಾದ ಪ್ರಯುಕ್ತ **ಗುರು ಲಿಂಗ ಜಂಗಮಾರಾಧನೆಯನ್ನು**
**ದಿನಾಂಕ 11-05-2023ನೇ ಗುರುವಾರ ಬೆಳಿಗ್ಗೆ 11.30 ಗಂಟೆಗೆ**
**ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಸದ್ಯೋಜಾತ ಮಠದಲ್ಲಿ**
ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀಮತಿ ಸವಿತಾ ಮತ್ತು ಶ್ರೀ ಎನ್.ಎ. ಮುರುಗೇಶ್,**
ಅಧ್ಯಕ್ಷರು, ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್
ಮತ್ತು ನರಗನಹಳ್ಳಿ ಮಠದ ವಂಶಸ್ಥರು, ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



ಸ್ವಾದದ ಸಿತಾರ..
ಗೆದ್ದಿದೆ ಕಾಂತಾರ..
ಧನ್ಯವಾದಗಳು ಕರ್ನಾಟಕ..
ಎಲ್ಲರೂ ಅವಿರೋಧದಿಂದ ಆಯ್ಕೆ ಮಾಡಿದರು ಕಾಂತಾರ!





ರಿಟೇಲ್ ಪಾನ್ ಮಾರಾಟ ಬಂಧುಗಳಿಗೆ ಸ್ಕೀಮ್ :
ರೂ. 60/- ರಿಂದ ರೂ. 100/- ವರೆಗೆ ಉಚಿತ ಉಡುಗೊರೆಗಳು
ಕಾಂತಾರ ಪಾನ ಮಸಾಲಾ ಪ್ರತಿ ಪ್ಯಾಕೆಟ್ ಒಳಗಡೆ ರೂ. 60/- ರಿಂದ ರೂ.100/- ವರೆಗೆ ಖಚಿತವಾಗಿ ಉಚಿತ.
ಉಚಿತ ಸ್ಟಾರ ಬಿಗ್ಗಿ ಪಾನ ಮಸಾಲದ 2 ಪಾವುಚಗಳು ಖಚಿತವಾಗಿ ಉಚಿತ
ಕಾಂತಾರ ಪಾನ ಮಸಾಲದ ಪ್ರತಿ ಪ್ಯಾಕೆಟ್ ಒಳಗಡೆ ಸ್ಟಾರ ಬಿಗ್ಗಿ ಪಾನ ಮಸಾಲದ 2 ಪಾವುಚಗಳು ಖಚಿತವಾಗಿ ಉಚಿತ
1 ಪ್ಯಾಕೇಟ =30+2 ಉಚಿತ ಪಾವುಚಗಳು=32 ಪಾವುಚಗಳು




ಕಾಂತಾರ 555 ಪಾನ ಮಸಾಲಾ
M : 09552572564, 098440 55085 E : suhsur@gmail.com
Statutory Warning: Chewing of Pan Masala is injurious to health. ● Not for Minors.

## ವಿವಿಧ ಮಠಾಧೀಶರಿಂದ ಮತದಾನ



ಸಿರಿಗೆರೆಯ ಸ.ಹಿ.ಪ್ರಾ ಶಾಲೆಯಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮತದಾನ ಮಾಡಿದರು.


ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿಯವರು ಕಾಗಿನೆಲೆಯ ಮತಗಟ್ಟೆಯಲ್ಲಿ ಮತದಾನ ಮಾಡಿದರು.


ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿಯವರು ನಂದಿಗುಡಿ ಗ್ರಾಮದ ಮತಗಟ್ಟೆಯಲ್ಲಿ ಮತದಾನ ಮಾಡಿದರು.


ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಬೆಂಗಳೂರಿನ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.


ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ರಾಜನಹಳ್ಳಿ ಗ್ರಾಮದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.


ರಾಣೇಬೆನ್ನೂರು ತಾಲ್ಲೂಕಿನ ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀಗಳು ಮತದಾನ ಮಾಡಿದರು.

## ರಂಭಾಪುರಿ ವೀರಸೋಮೇಶ್ವರ ಶ್ರೀಗಳಿಂದ ಮತದಾನ




ಬಾಳೆಹೊನ್ನೂರು, ಮೇ 10- ವಿಧಾನಸಭಾ ಚುನಾವಣೆಯಲ್ಲಿ ಶ್ರೀ ರಂಭಾಪುರಿ ಮಠದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಮತ ಚಲಾಯಿಸಿದರು.
ಮತದಾನದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀ ಜಗದ್ಗುರುಗಳು, ಮತದಾನ ಪ್ರತಿಯೊಬ್ಬರ ಹಕ್ಕು. ಈ ಪವಿತ್ರ ಕಾರ್ಯದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಮತ ಚಲಾಯಿಸಬೇಕಾದುದು ಮತದಾರರ ಕರ್ತವ್ಯವಾಗಿದೆ ಎಂದರು. ಇದಕ್ಕಾಗಿ ಚುನಾವಣಾ ಆಯೋಗ ಮತದಾರರಿಗೆ ತೊಂದರೆಯಾಗದಂತೆ ಎಲ್ಲ ರೀತಿಯ ವ್ಯವಸ್ಥೆ ಮಾಡಿದ್ದು ಸಮಾಧಾನದ ವಿಷಯ ಎಂದರು.



ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮೀಜಿ ಕೊಟ್ಟೂರಿನ ಶ್ರೀ ಮರುಳಸಿದ್ದೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಮತದಾನ ಹಕ್ಕನ್ನು ಚಲಾಯಿಸಿದರು.

## ಇಂದಿನ ರಾಜಕಾರಣ, ರಾಜಕಾರಣಿಗಳು, ಮತದಾರರ ಬಗ್ಗೆ ಬೇಸರ

ಸಾಣೇಹಳ್ಳಿ, ಮೇ 10- ಮತದಾರರಲ್ಲಿ ಜಾಗೃತಿ ಮೂಡಿಸುತ್ತಾ ಬಂದಿರುವ ಸಾಣೇಹಳ್ಳಿ ಶ್ರೀಮಠದ ಪಟ್ಟಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಯಾವ ಚುನಾವಣೆಯಲ್ಲೂ ಮತ ಚಲಾವಣೆಯಿಂದ ದೂರ ಉಳಿದಿಲ್ಲ. ಅಂತೆಯೇ ಇಂದು ಸಾಣೇಹಳ್ಳಿಯಲ್ಲಿ ತಮ್ಮ ಮತವನ್ನು ಚಲಾಯಿಸಿ ಮತದಾನ ಪ್ರತಿಯೊಬ್ಬರ ಹಕ್ಕು. ಯೋಗ್ಯರನ್ನು ಆಯ್ಕೆ ಮಾಡಲು ಇರುವ ಸದಾವಕಾಶ ಎಂದು ಹೇಳಿದರು.
ಇಂದಿನ ರಾಜಕಾರಣ, ರಾಜಕಾರಣಿಗಳ ಮತ್ತು ಮತದಾರರ ಬಗ್ಗೆ ಬೇಸರ ವ್ಯಕ್ತಪಡಿಸಿದ ಶ್ರೀಗಳು, ರಾಜಕಾರಣಿಗಳು ಆಮಿಷವೊಡ್ಡಿ ಮತಗಳನ್ನು ಕೊಳ್ಳುವ ದಂಧೆಗೆ ಕಡಿವಾಣ ಹಾಕಬೇಕು. ಅದರಂತೆ ಆಮಿಷಗಳಿಗೆ ಬಲಿಯಾಗಿ ತಮ್ಮ ಮತ ಮಾರಿಕೊಳ್ಳುವ ಹೀನ ಬುದ್ಧಿ



ಮತದಾರರಿಗೆ ಬರಬಾರದು. ಆಗ ಮಾತ್ರ ಯೋಗ್ಯರನ್ನು ಆಯ್ಕೆ ಮಾಡಲು ಅವಕಾಶವಾಗುತ್ತದೆ ಎಂದರು.

# ಜಿಲ್ಲೆಯಲ್ಲಿ ಶೇ.77.20ರಷ್ಟು ಮತದಾನ

**(1ನೇ ಪುಟದಿಂದ)** ಶೇ.83.89, ಚನ್ನಗಿರಿ ಶೇ. 81.94 ಹಾಗೂ ಹೊನ್ನಾಳಿ ಕ್ಷೇತ್ರದಲ್ಲಿ ಶೇ 83.78 ರಷ್ಟು ಮತದಾನವಾಗಿದೆ.

ಬೆಳಗ್ಗೆ 9 ಗಂಟೆಯ ವೇಳೆಗೆ ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಿಂದ 100792 ಮತದಾರರು ಮತದಾನ ಮಾಡಿ ಶೇ 6.99 ಮತದಾನವಾಗಿತ್ತು. ಮತದಾನ ದಿನ ಎಲ್ಲಾ ಸರ್ಕಾರಿ ಕಚೇರಿಗಳಿಗೆ, ಶಾಲಾ, ಕಾಲೇಜುಗಳಿಗೆ ರಜೆ ಮತ್ತು ಸಾರ್ವಜನಿಕ, ಖಾಸಗಿ ಕೈಗಾರಿಕೆಗಳಿಗೆ ಹಾಗೂ ಎಲ್ಲಾ ಅಂಗಡಿ ಮುಂಗಟ್ಟುಗಳಿಗೆ ರಜೆ ನೀಡಿದ್ದರಿಂದ ಕುಟುಂಬ ಸಮೇತರಾಗಿ ಬೆಳಗಿನ ಉಪಹಾರ ಮುಗಿಸಿ ಮತದಾನ ಕೇಂದ್ರದತ್ತ ಹೆಜ್ಜೆ ಹಾಕಿದರು.

ಮಧ್ಯಾಹ್ನ 11 ಗಂಟೆಯ ವೇಳೆಗೆ 2,99,670 ಜನರು ಮತದಾನ ಮಾಡಿ ಶೇ20.78 ಕ್ಕೆ ತಲುಪಿತು. ಮಧ್ಯಾಹ್ನ 1 ಗಂಟೆಯ ವೇಳೆ 5,57,261 ಜನರು ಮತದಾನ ಮಾಡಿ ಶೇ.38.64 ಕ್ಕೆ ತಲುಪಿತು. ಸಂಜೆ 5 ಗಂಟೆಯ ವೇಳೆಗೆ 10,18,309 ಮತದಾರರು ಮತದಾನ ಮಾಡಿದ್ದರು. ಪ್ರಮಾಣ ಶೇ.70.61 ಕ್ಕೆ ತಲು ಪಿತು. ಅಂತಿಮವಾಗಿ ಶೇ.77.20ರಷ್ಟು ಮತದಾನವಾಯಿತು.

### ರಾತ್ರಿ ಹಣದ ಹೊಳೆ

ಮಂಗಳವಾರ ರಾತ್ರಿ ದಾವಣಗೆರೆ ನಗರದಲ್ಲಿ ಹಣದ ಹೊಳೆಯೇ ಹರಿದೆ ಎನ್ನಲಾಗಿದ್ದು, ಎರಡೂ ರಾಷ್ಟ್ರೀಯ ಪಕ್ಷಗಳು ಸ್ಪರ್ಧೆಗಿಳಿದವರಂತೆ ಹಣ ಹಂಚಿರುವ ಬಗ್ಗೆ ಮತದಾರರೇ ಮಾತನಾಡಿಕೊಳ್ಳುತ್ತಿದ್ದರು. ಒಂದು ಪಕ್ಷ ಪ್ರತಿ ಮನೆಗೆ ಇಷ್ಟು ಸಾವಿರ ರೂ. ಎಂದು ಹಂಚಿದ್ದರೆ, ಮತ್ತೊಂದು ಪಕ್ಷ ಪ್ರತಿ ಮತಕ್ಕೆ ಇಂತಿಷ್ಟು ಸಾವಿರ ಎಂದು ಹಂಚಿದೆ ಎಂಬ ಮಾತುಗಳು ಹರಿದಾಡಿದವು. ಇನ್ನು ಕೆಲವರು ನಮ್ಮ ಮನೆಯಲ್ಲಿ ಇಷ್ಟು ಓಟುಗಳಿವೆ ಎಂದು ಹೇಳಿ ತಾವೇ ಅಲ್ಲಿನ ಸ್ಥಳೀಯ ಮುಖಂಡರ ಬಳಿ ಹಣ ಪಡೆದಿದ್ದಾರೆ. ತಿಂಗಳು ಗಟ್ಟಲೆ ಅಬ್ಬರದ ಪ್ರಚಾರ ನಡೆಸಿದರೂ, ಮತದಾನದ ಹಿಂದಿನ ರಾತ್ರಿ ಹಣ ಹಂಚುವಿಕೆಯೂ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುದು ಸ್ವತಃ ಪಕ್ಷಗಳ ಅನಿಸಿಕೆಯೂ ಹೌದು.

### ಊಟಕ್ಕೆ-ಓಡಾಟಕ್ಕೆ ಪರದಾಟ

**ಬುಧವಾರ ಮತದಾನ ಕಾರ್ಯ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ನಗರ ಭಾಗಶಃ ಸ್ತಬ್ಧವಾದಂತಿತ್ತು. ವಾಹನಗಳ ಓಡಾಟ ಕಡಿಮೆಯಾಗಿತ್ತು. ಬಹುತೇಕ ಹೋಟೆಲ್‌ಗಳು ಮುಚ್ಚಲ್ಪಟ್ಟಿದ್ದವು. ಮಾರುಕಟ್ಟೆ ಪ್ರದೇಶದಲ್ಲಿ ವ್ಯವಹಾರ ವಿರಳವಾಗಿತ್ತು. ಸಾಕಷ್ಟು ಬಸ್‌ಗಳನ್ನು ಚುನಾವಣಾ ಕಾರ್ಯಕ್ಕೆ ಬಳಸಿಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಊರುಗಳಿಗೆ ಹೋಗಬೇಕಾದವರೂ, ಬರಬೇಕಾದವರು ಬಸ್‌ಗಳಿಲ್ಲದೆ ಪರದಾಡಬೇಕಾಯಿತು. ಇನ್ನು ಆಟೋಗಳ ಓಡಾಟವೂ ಕಡಿಮೆಯಾಗಿತ್ತು.**

## ಫ್ಲೈಯಿಂಗ್ ಸ್ಕ್ವಾಡ್‌ನಿಂದ 21 ಸಾವಿರ ರೂ. ವಶ

ದಾವಣಗೆರೆ, ಮೇ 10- ಜಗಳೂರು ವಿಧಾನಸಭಾ ಕ್ಷೇತ್ರದ ಚುನಾವಣಾ ಆಧಿಕಾರಿಗಳು ಬಿಳಿಚೋಡು ಪೊಲೀಸ್ ಠಾಣೆ ವ್ಯಾಪ್ತಿಯ ಹುಚ್ಚಂಗಿಪುರ ಗ್ರಾಮದಲ್ಲಿ ಇಂದು ಬೆಳಗಿನ ಜಾವ ಗಸ್ತು ತಿರುಗುತ್ತಿರುವಾಗ ಗ್ರಾಮದ ಮುಖ್ಯ ರಸ್ತೆಯಲ್ಲಿ ಗುಂಪಾಗಿರುವ ಜನರ ಬಳಿ ಹೋದಾಗ 500 ರೂ. ಮುಖ ಬೆಲೆಯ 42 ನೋಟುಗಳು ಒಟ್ಟು 21 ಸಾವಿರ ರೂ. ದೊರೆತಿವೆ. ಈ ಹಣ ಯಾರದು ಎಂದು ತಿಳಿದು ಬಂದಿರುವುದಿಲ್ಲ. ತನಿಖಾ ತಂಡ ಹೋದ ತಕ್ಷಣ ಜನರು ಅಲ್ಲಿಂದ ಕಾಲ್ಕಿತ್ತಿದ್ದಾರೆ. ಬಿಳಿಚೋಡು ಪೊಲೀಸ್ ಠಾಣೆಯಲ್ಲಿ ತನಿಖಾ ತಂಡ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07-05-2023ರ ಭಾನುವಾರ ನಿಧನರಾದ
ಸಹಕಾರಿ ಧುರೀಣರೂ, 'ಸಹಕಾರ ರತ್ನ' ಪುರಸ್ಕೃತರೂ ಆಗಿದ್ದ ಲಿಂ|| ಎನ್.ಎಂ.ಜೆ.ಬಿ. ಆರಾಧ್ಯ ಇವರ ಧರ್ಮಪತ್ನಿ
ಮತ್ತು ಕಲಾ ಪ್ರಕಾಶ ವೃಂದದ ನಿರ್ದೇಶಕರಾದ ಶ್ರೀ ಎನ್.ಎ. ಮುರುಗೇಶ್ ಅವರ ಮಾತೃಶ್ರೀಯವರಾದ

**ಶ್ರೀಮತಿ ಲಲಿತಮ್ಮ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ರಮಣ್‌ಲಾಲ್ ಪಿ. ಸಂಘವಿ** – ಅಧ್ಯಕ್ಷರು
**ಪೆ.ನಾ. ಗೋಪಾಲ್‌ರಾವ್** – ಉಪಾಧ್ಯಕ್ಷರು
**ಎಸ್.ಕೆ. ವೀರಣ್ಣ** – ಪ್ರಧಾನ ಕಾರ್ಯದರ್ಶಿ
**ಕೆ. ತಿಮ್ಮಪ್ಪ** – ಸಹ ಕಾರ್ಯದರ್ಶಿ

**ನಿರ್ದೇಶಕರುಗಳು :**
- ಜಿ.ಕೆ. ಪಂಚಣ್ಣ
- ಕಿರುವಾಡಿ ವಿ. ಸೋಮಶೇಖರ್
- ಎ.ಹೆಚ್. ಕುಬೇರಪ್ಪ
- ಶ್ರೀಮತಿ ಜಯಮ್ಮ ಪರಶುರಾಮಪ್ಪ
- ಎಸ್.ಕೆ. ಪ್ರಭುಪ್ರಸಾದ್
- ಶ್ರೀಮತಿ ಶಶಿಕಲಾ ರುದ್ರಯ್ಯ ಪಿ.ಎಂ.
- ಕೆ.ಎಂ. ಜ್ಯೋತಿಪ್ರಕಾಶ್
- ಎನ್. ತುಳಸಿನಾಥ್
- ವಿ. ಬಸವರಾಜಯ್ಯ
- ಶ್ರೀಮತಿ ಅನಿಲಾ ಇಂಧೂದರ ನಿಶಾನಿಮಠ
- ಟಿ. ನಿಜಲಿಂಗಯ್ಯ
- ಹೆಚ್.ಎಸ್. ಗುರುನಾಥ
- ಶ್ರೀಮತಿ ಬಿ. ಅನಸೂಯ
- ವೀರೇಶ (ಸ್ವಾಮಿ)

ಮತ್ತು ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ

**ಕಲಾ ಪ್ರಕಾಶ ವೃಂದ (ರಿ.)**
ದಾವಣಗೆರೆ – ಹರಿಹರ ಅರ್ಬನ್ ಕೋ-ಆಪ್. ಬ್ಯಾಂಕ್ ಸಹಕಾರ ಸಮುದಾಯ ಭವನ
ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.


# ಹರಪನಹಳ್ಳಿ: ಶಾಂತಿಯುತ ಮತದಾನ







ಹರಪನಹಳ್ಳಿ, ಮೇ 10- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬುಧವಾರ ಸಣ್ಣಪುಟ್ಟ ವಾಗ್ವಾದಗಳನ್ನು ಹೊರತುಪಡಿಸಿ, ಶಾಂತಿಯುತ ಮತದಾನವಾಗಿದೆ.

ಬೆಳಿಗ್ಗೆ 7ರಿಂದ ನಿಧಾನವಾಗಿ ಆರಂಭವಾದ ಮತದಾನ, ನಂತರ ಚುರುಕುಗೊಂಡಿತು. ಸಂಜೆಯ ಹೊತ್ತಿಗೆ ಬಿರುಸಿನಿಂದ ಮತದಾನ ಜರುಗಿತು.

ಕುಂಚೂರು ಕೆರೆ ತಾಂಡಾದ ಮತಗಟ್ಟೆಯಲ್ಲಿ ಮಧ್ಯಾಹ್ನ 12ರ ಸಮಯದಲ್ಲಿ ಮತಗಟ್ಟೆ ಕೇಂದ್ರದ ಹೊರ ಗೋಡೆಗೆ ಅಂಟಿಸಲಾದ ಅಭ್ಯರ್ಥಿಗಳ ವಿವರ ಇರುವ ಪೋಸ್ಟರ್‌ನಲ್ಲಿ ಪಕ್ಷೇತರ ಅಭ್ಯರ್ಥಿ ಎಂ.ಪಿ.ಲತಾ ರವರ ಚಿತ್ರವನ್ನು ಯಾರೋ ಹಾಳು ಮಾಡಿದ ಕಾರಣ ದೂರು ಬಂದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಗೋಡೆಯಿಂದ ತೆಗೆಸಿದರು.

ವಡ್ಡಿನ ದಾದಾಪುರ ಹಾಗೂ ಗೋವೇರಹಳ್ಳಿ ಮತ ಕೇಂದ್ರಗಳಲ್ಲಿ ಮತದಾನ ಆರಂಭವಾಗಿ 3 ಗಂಟೆಯ ನಂತರ ವಿವಿ ಪ್ಯಾಟ್‌ನಲ್ಲಿ ತಾಂತ್ರಿಕ ದೋಷದ ಹಿನ್ನೆಲೆಯಲ್ಲಿ ಬದಲಾವಣೆ ಮಾಡಲಾಯಿತು.

ಕೆಲವೊಂದು ಕಡೆಗಳಲ್ಲಿ ಅಣಕು ಮತದಾನಕ್ಕೂ ಪೂರ್ವದಲ್ಲಿ 3 ವಿವಿ ಪ್ಯಾಟ್, 1 ಕಂಟ್ರೋಲ್ ಯೂನಿಟ್, 1 ಬ್ಯಾಲೆಟ್ ಯೂನಿಟ್ ತಾಂತ್ರಿಕ ದೋಷದ ಹಿನ್ನೆಲೆಯಲ್ಲಿ ಬದಲಾವಣೆ ಮಾಡಲಾಗಿದೆ.

**ಮತದಾನ ಮಾಡಿದ ಪ್ರಮುಖರು:** ಬಿಜೆಪಿ ಅಭ್ಯರ್ಥಿ, ಶಾಸಕ ಜಿ.ಕರುಣಾಕರ ರೆಡ್ಡಿ ಅವರು ಶಿಕ್ಷಕರ ಕಾಲೋನಿಯ ಮತಗಟ್ಟೆ 101ರಲ್ಲಿ ಪತ್ನಿ, ಇಬ್ಬರು ಪುತ್ರರು ಸಮೇತ ಆಗಮಿಸಿ, ವಿಧಾನಸಭಾ ಚುನಾವಣೆಯಲ್ಲಿ ಇದೇ ಪ್ರಥಮ ಬಾರಿಗೆ ಮತದಾನ ಮಾಡಿದರು.

ನಂತರ ಮಾತನಾಡಿದ ಅವರು, ಕಳೆದ 5 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ, ಉತ್ತಮ ಪ್ರತಿಕ್ರಿಯೆ ಇದ್ದು, ಜಯ ಗಳಿಸುವ ವಿಶ್ವಾಸ ಇದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎನ್.ಕೊಟ್ರೇಶ್ ಸ್ವಗ್ರಾಮ ಅರಸೀಕೆರೆಯಲ್ಲಿ ಮತದಾನ ಮಾಡಿದರು. ಪಕ್ಷೇತರ ಅಭ್ಯರ್ಥಿ ಎಂ.ಪಿ.ಲತಾರವರು ಪಟ್ಟಣದ ಉಪ್ಪಾರಗೇರಿ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಬಳ್ಳಾರಿ ಸಂಸದ ವೈ.ದೇವೆಂದ್ರಪ್ಪ ಸ್ವಗ್ರಾಮ ತಾಲ್ಲೂಕಿನ ಅರಸೀಕೆರೆಯಲ್ಲಿ ಪತ್ನಿ ಸಮೇತರಾಗಿ ಮತ ಚಲಾಯಿಸಿದರು. ಪಟ್ಟಣದ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಸ್ವಾಮೀಜಿ ಹಾಗೂ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ.ಚಂದ್ರಶೇಖರಯ್ಯ ಬಾಲಕಿಯರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಿದರು.

ನೀಲಗುಂದ ಗುಡ್ಡದ ವಿರಕ್ತಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಶಾಲೆಯ ಮತಗಟ್ಟೆಯಲ್ಲಿ ಮತದಾನ ಮಾಡಿದರು.

# ಹರಿಹರ : 73.18 ಮತದಾನ

### ಬಿಜೆಪಿಗೆ ಮತ ಹಾಕುವಂತೆ ಹೇಳಿದ ಸಿಬ್ಬಂದಿ

ಹರಿಹರ, ಮೇ 10- ಕೆಲವೊಂದು ಮತಗಟ್ಟೆ ಕೇಂದ್ರಗಳಲ್ಲಿ ಸಣ್ಣ - ಪುಟ್ಟ ಗಲಾಟೆ ಹೊರತು ಪಡಿಸಿ, ಹರಿಹರ ತಾಲ್ಲೂಕಿನ 228 ಮತಗಟ್ಟೆ ಕೇಂದ್ರಗಳಲ್ಲಿ ಶಾಂತಿಯುತವಾಗಿ ಶೇ. 73.18 ರಷ್ಟು ಬಿರುಸಿನ ಮತದಾನ ನಡೆಯಿತು. ಹಲವಾರು ಮತಗಟ್ಟೆ ಕೇಂದ್ರಗಳಲ್ಲಿ ವಿದ್ಯುನ್ಮಾನ ಯಂತ್ರಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ, ಮತದಾನ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

10 ಗಂಟೆ ಸಮಯದಲ್ಲಿ ನಗರದ ಕುಂಬಾರ ಓಣಿ ಹತ್ತಿರದ ಮತಗಟ್ಟೆ 31 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಶಾರದಮ್ಮ ಎಂಬುವವರು ಬಿಜೆಪಿ ಪಕ್ಷಕ್ಕೆ ಮತವನ್ನು ಹಾಕುವಂತೆ ಹೇಳಿದರು ಎಂಬ ಕಾರಣದಿಂದಾಗಿ ಸ್ವಲ್ಪ ಸಮಯ ಮತಗಟ್ಟೆ ಬಳಿ ಬಿಗುವಿನ ವಾತಾವರಣ ಸೃಷ್ಟಿಯಾಯಿತು. ಆ ಸಮಯದಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಸ್ಥಳಕ್ಕೆ ಆಗಮಿಸಿ, ಘಟನೆ ವಿಚಾರಗಳನ್ನು ತಹಶೀಲ್ದಾರ್ ಪೃಥ್ವಿ ಸಾನಿಕಂ, ಸಿಪಿಐ ದೇವಾನಂದ್, ಪಿಎಸ್‌ಐ ವೀಣಾ ಮಂಡ್ಯರವರ ಗಮನಕ್ಕೆ ತಂದರು. ತಹಶೀಲ್ದಾರ್‌ರವರು ತಕ್ಷಣವೇ ಸಿಬ್ಬಂದಿಯನ್ನು ಬದಲಾವಣೆ ಮಾಡಿದರು.

ನಗರದ ಬಹುತೇಕ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ ಸುಡುವ ಬಿಸಿಲಿನ ತಾಪವನ್ನು ಲೆಕ್ಕಿಸದೇ ಜನರು ಮತದಾನಕ್ಕೆ ಬಂದಿದ್ದರು. ಸಂಜೆ ನಾಲ್ಕು ಗಂಟೆಯ ಸಮಯದಲ್ಲಿ ಅರ್ಧ ಗಂಟೆ ಕಾಲ ದಿಢೀರ್ ಮಳೆ ಸುರಿಯಿತು.

ನಗರದ ಜಿ.ಬಿ.ಎಂ.ಎಸ್ ಶಾಲೆಯ ಬೂತ್ ನಂ. 51 ರಲ್ಲಿ ಮಳೆ ಬೀಳುವ ಸಮಯದಲ್ಲಿ ವಿದ್ಯುತ್ ಕಡಿತವಾಗಿತ್ತು. ಆಗ ಬೂತ್ ಏಜೆಂಟ್ ಒಬ್ಬರು, ಒಂದು ಪಕ್ಷದವರಿಗೆ ಮಾತ್ರ ಮೊಬೈಲ್ ಟಾರ್ಚ್ ಹಾಕಿದ್ದಾರೆ ಎಂದು ಗಲಾಟೆ ನಡೆಯಿತು. ಪೊಲೀಸರ ಜೊತೆ ಮಾತಿನ ಚಕಮಕಿ ನಡೆದಾಗ ದಾವಣಗೆರೆ ಡಿವೈಎಸ್ಪಿ ಕನ್ನಿಕಾ ಸಕ್ರಿವಾಲ್ ಮತ್ತು ಸಿಪಿಐ ದೇವಾನಂದ್ ಆಗಮಿಸಿ, ಗಲಾಟೆ ತಹಬಂದಿಗೆ ತಂದರು.

ಡಿ.ಆರ್.ಎಂ. ಶಾಲಾ ಕೊಠಡಿಯಲ್ಲಿ ಮಾಜಿ ಶಾಸಕ, ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್, ತಾಲ್ಲೂಕಿನ ಬೂದಿಹಾಳ ಸರ್ಕಾರಿ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ಮಾಜಿ ಶಾಸಕ, ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಮತ್ತು ಸರ್ಕಾರಿ ಶಾಲಾ ಕೊಠಡಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ತಮ್ಮ ಮತದಾನ ಮಾಡಿದರು.

ಮತದಾನ ಪೂರ್ಣಗೊಂಡ ನಂತರ, ಮತ ಯಂತ್ರಗಳನ್ನು ನಗರದ ಸೆಂಟ್ ಮೇರಿಸ್ ಶಾಲೆ ಆವರಣಕ್ಕೆ ತರಲಾಯಿತು.

ಕೆಲವೊಂದು ಮತಗಟ್ಟೆ ಕೇಂದ್ರದಲ್ಲಿ ಸರಿಯಾದ ರೀತಿಯಲ್ಲಿ ಸೌಲಭ್ಯಗಳು ಇರದೇ ಇರುವುದು ಮತ್ತು ವೃದ್ಧರು ಮತಗಟ್ಟೆ ಕೇಂದ್ರಕ್ಕೆ ಹೋಗುವಾಗ ವ್ಹೀಲ್ ಚೇರ್ ಕಡಿಮೆ ಸಂಖ್ಯೆಯಲ್ಲಿ ಇದ್ದುದ್ದು, ನೀರಿನ ವ್ಯವಸ್ಥೆ ಇಲ್ಲದಿರುವುದು ಕಂಡು ಬಂತು.



## ವಿಜಯಪುರ : ಮತಯಂತ್ರ ಒಡೆದ ಗ್ರಾಮಸ್ಥರು

### 23 ಜನರ ಬಂಧನ

ವಿಜಯಪುರ, ಮೇ 10 - ವಿಜಯಪುರದ ಮಸಬಿನಾಳ ಗ್ರಾಮದಲ್ಲಿ ಜನರು ಮತ ಯಂತ್ರಗಳನ್ನು ಒಡೆದು ಹಾಕಿದ ಘಟನೆ ನಡೆದಿದೆ.

ಹೆಚ್ಚುವರಿ ವಿವಿಪ್ಯಾಟ್ ಹಾಗೂ ಮತ ಯಂತ್ರಗಳನ್ನು ಇಲ್ಲಿಂದ ಸಾಗಿಸಲಾಗುತ್ತಿತ್ತು. ಆದರೆ, ಮತದಾನ ಅರ್ಧಕ್ಕೇ ನಿಲ್ಲಿಸಿ ಮತ ಯಂತ್ರಗಳನ್ನು ತೆಗೆದುಕೊಂಡು ಹೋಗಲಾಗುತ್ತಿದೆ ಎಂದು ತಪ್ಪಾಗಿ ಭಾವಿಸಿದ ಗ್ರಾಮಸ್ಥರು, ಅವುಗಳನ್ನು ಪುಡಿ ಮಾಡಿದ್ದಾರೆ ಎಂದು ಸೆಕ್ಟರ್ ಅಧಿಕಾರಿ ತಿಳಿಸಿದ್ದಾರೆ.

ಮಸಬಿನಾಳ ಗ್ರಾಮದಲ್ಲಿ ಇವಿಎಂ ಯಂತ್ರಗಳನ್ನು ಪುಡಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮಕ್ಕೆ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಬಸವನ ಬಾಗೇವಾಡಿ ಡಿವೈಎಸ್ಪಿ ಅವರು ಮಾಹಿತಿ ಕಲೆ ಹಾಕಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ್, ವಿವಿಪ್ಯಾಟ್ ಹಾಗೂ ಇವಿಎಂ ಯಂತ್ರಗಳನ್ನು ಒಡೆದು ಹಾಕಿದವರ ಮೇಲೆ ಕ್ರಮ ಜರುಗಿಸಲು ಸೂಚನೆ ನೀಡಿದ್ದಾರೆ. ಘಟನೆಯಲ್ಲಿ ಭಾಗಿಯಾಗಿರುವ 23 ಜನರನ್ನು ಬಂಧಿಸಲಾಗಿದೆ.


## ಹಿರೇಎಮ್ಮಿಗನೂರು ಕಲ್ಲಪ್ಪ.ಎಸ್. ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ
**ಹಿರೇಎಮ್ಮಿಗನೂರು ಕಲ್ಲಪ್ಪ.ಎಸ್. (73)**
(ನಿವೃತ್ತ ಶಿಕ್ಷಕರು)
ಇವರು ದಿನಾಂಕ 11.04.2023ರ ತಡ ರಾತ್ರಿ 12.05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯಯನ್ನು ದಿನಾಂಕ 11.05.2023ರ ಗುರುವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**


## ಸೈನ್ಯದ ದಂತ ವೈದ್ಯಕೀಯ ವಿಭಾಗಕ್ಕೆ ಲಿಂಗ ತಟಸ್ಥ ನೇಮಕ

ನವದೆಹಲಿ, ಮೇ 10 - ಸೈನ್ಯದ ದಂತ ವೈದ್ಯಕೀಯ ವಿಭಾಗದಲ್ಲಿ (ಎ.ಡಿ.ಸಿ.) ಲಿಂಗ ತಟಸ್ಥ ರೀತಿಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು. ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಕೋಟಾ ಇರುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ. ಎ.ಡಿ.ಸಿ.ಯಲ್ಲಿ ಶೇ.10ರಷ್ಟು ಸೀಟುಗಳನ್ನು ಮಾತ್ರ ಮಹಿಳೆಯರಿಗೆ ಮೀಸಲಿಡಲಾಗಿತ್ತು. ಈ ಬಗ್ಗೆ ಸುಪ್ರೀಂ ಕೋರ್ಟ್ ಕಳೆದ ಏಪ್ರಿಲ್ 11ರಂದು ಪ್ರಶ್ನಿಸಿತ್ತು. ನಂತರ ನ್ಯಾಯಾಲಯದ ಎದುರು ಅರ್ಜಿ ದಾಖಲಿಸಿರುವ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಎಂ. ನಟರಾಜ್, ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಕೋಟಾ ನೀಡುವುದನ್ನು ನಿಲ್ಲಿಸಲಾಗುವುದು. ಮುಂದಿನ ದಿನಗಳಲ್ಲಿ ನೇಮಕಾತಿ ಲಿಂಗ ತಟಸ್ಥವಾಗಿರಲಿದೆ ಎಂದು ತಿಳಿಸಿದ್ದಾರೆ.

## ನಿಸರ್ಗ ಕಾನ್ವೆಂಟ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 10- ನಗರದ ಎಸ್‌ಓಜಿ ಕಾಲೋನಿ ನಿಸರ್ಗ ಕಾನ್ವೆಂಟ್ ಶಾಲೆಗೆ ಶೇ. 100 ರಷ್ಟು ಫಲಿತಾಂಶ ಬಂದಿದೆ. ಉನ್ನತ ಶ್ರೇಣಿಯಲ್ಲಿ 8, ಪ್ರಥಮ ದರ್ಜೆಯಲ್ಲಿ 8, ದ್ವಿತೀಯ ದರ್ಜೆಯಲ್ಲಿ 21 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

# 20 ಸಾವಿರ ಮತಗಳ ಅಂತರದಿಂದ ಗೆಲ್ಲುವೆ

### ಬೂದಿಹಾಳ್‌ನಲ್ಲಿ ಮತ ಚಲಾಯಿಸಿದ ನಂತರ ಬಿ.ಪಿ. ಹರೀಶ್ ಹೇಳಿಕೆ




ಮಲೇಬೆನ್ನೂರು, ಮೇ 10- ಹರಿಹರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಮಾಜಿ ಶಾಸಕ ಬಿ.ಪಿ. ಹರೀಶ್ ಅವರು ತಮ್ಮ ಸ್ವಗ್ರಾಮ ಬೂದಿಹಾಳ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಪತ್ನಿ ಶ್ರೀಮತಿ ಅನುರಾಧ, ಪುತ್ರಿ ಶ್ರೀಮತಿ ಅನುಷಾ ಅವರೊಂದಿಗೆ ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಈ ವೇಳೆ 'ಜನತಾವಾಣಿ'ಯೊಂದಿಗೆ ಮಾತನಾಡಿದ ಹರೀಶ್ ಅವರು, ಹರಿಹರ ಕ್ಷೇತ್ರದಲ್ಲಿ ಹಿಂದೆಂದೂ ಸಿಗದಂತಹ ಬೆಂಬಲ ಈ ಬಾರಿ ನನಗೆ ಸಿಕ್ಕಿದೆ. ನಾನು ಈ ಹಿಂದೆ ಶಾಸಕನಾಗಿದ್ದ ಸಂದರ್ಭದಲ್ಲಿ ಕೈಗೊಂಡಿದ್ದ ಅಭಿವೃದ್ಧಿ ಕಾಮಗಾರಿಗಳು ಇಂದಿಗೂ ಹಚ್ಚ ಹಸಿರಾಗಿವೆ. ನನ್ನ ನಂತರ ಶಾಸಕರಾದ ಇಬ್ಬರ ಅವಧಿಯಲ್ಲೂ ಅಂತಹ ಹೇಳಿಕೊಳ್ಳುವಂತಹ ಕಾಮಗಾರಿಗಳು ಆಗಿಲ್ಲ. ಈ ಎಲ್ಲವನ್ನು ಗಮನಿಸಿರುವ ಕ್ಷೇತ್ರದ ಜನ ಈ ಬಾರಿ ನನ್ನನ್ನು ಪಕ್ಷಾತೀತವಾಗಿ ಬೆಂಬಲಿಸಿದ್ದಾರೆ ಎಂಬ ಸಂಪೂರ್ಣ ವಿಶ್ವಾಸ ನನಗಿದೆ.

ಈ ಹಿನ್ನೆಲೆಯಲ್ಲಿ 20 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಜನ ನನ್ನನ್ನು ಆಯ್ಕೆ ಮಾಡಲಿದ್ದಾರೆ ಎಂದು ಹರೀಶ್ ಹೇಳಿದರು.

ಗ್ರಾ.ಪಂ. ಸದಸ್ಯ ಶಿವರಾಜ್, ಟಿವಿ ಅಂಗಡಿ ಅಶೋಕ್, ಹಳೇಮನೆ ಅಜ್ಜಪ್ಪ, ಆರ್. ರಾಜು ಹಾಗೂ ಗ್ರಾಮಸ್ಥರು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ಜಿಲ್ಲೆಯಲ್ಲಿ ಗೆಲುವು ಸಾಧಿಸಲಿರುವ ಬಿಜೆಪಿ ಅಭ್ಯರ್ಥಿಗಳು : ಸಂಸದ



ದಾವಣಗೆರೆ, ಮೇ 10- ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜನಪರ ಕಾರ್ಯಕ್ರಮಗಳಿಗೆ ಅಪಾರ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳೇ ಗೆಲುವು ಸಾಧಿಸಲಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ವಿಶ್ವಾಸ ವ್ಯಕ್ತಪಡಿಸಿದರು.

ವಿದ್ಯಾನಗರದ ಮಾಗನೂರು ಬಸಪ್ಪ ಶಾಲೆಯ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಜನರು ಬಿಜೆಪಿಗೆ ಒಲವು ತೋರಿದ್ದಾರೆ ಎಂದರು.

ದಾವಣಗೆರೆ ಉತ್ತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜೊತೆ ಪೈಪೋಟಿ ಇದ್ದರೂ ಸಹ ಗೆಲುವು ನಿಶ್ಚಿತ ಹಾಗೆಯೇ ದಕ್ಷಿಣದಲ್ಲಿ 10 ಸಾವಿರ ಮತಗಳ ಅಂತರದಿಂದ ಜಯ ಸಾಧಿಸಲಿದ್ದಾರೆ. ರಾಜ್ಯದಲ್ಲಿ 125 ಕ್ಕೂ ಹೆಚ್ಚು ಸ್ಥಾನಗಳು ಬಿಜೆಪಿಗೆ ಲಭಿಸಲಿವೆ ಎಂದು ಹೇಳಿದರು.

## ಕಾಂಗ್ರೆಸ್‌ಗೆ ತೀವ್ರ ಪೈಪೋಟಿ ಎಲ್ಲಿಯೂ ಇಲ್ಲ: ಎಸ್ಸೆಸ್



ದಾವಣಗೆರೆ, ಮೇ 10- ರಾಜ್ಯ ಬಿಜೆಪಿ ಭ್ರಷ್ಟಾಚಾರದಿಂದ ಜನರು ಬೇಸತ್ತಿದ್ದು, ರಾಜ್ಯದೆಲ್ಲೆಡೆ ಕಾಂಗ್ರೆಸ್ ಪಕ್ಷಕ್ಕೆ ಮತದಾರರ ಒಲವಿದೆ. ಎಲ್ಲೂ ಕೂಡ ಕಾಂಗ್ರೆಸ್ ಜೊತೆ ತೀವ್ರ ಪೈಪೋಟಿ ಇಲ್ಲ ಎಂದು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಹೇಳಿದರು. ನಗರದ ಎಂಸಿಸಿ ಬಿ ಬ್ಲಾಕ್ ನ ಐಎಂಎ ಹಾಲ್ ನಲ್ಲಿನ ಮತಗಟ್ಟೆಯಲ್ಲಿ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಈ ಮತಗಟ್ಟೆಯಲ್ಲಿ ಯಾವಾಗಲೂ ಕಡಿಮೆ ಮತದಾನ ಆಗುತ್ತಿತ್ತು. ಈ ಬಾರಿ ಮಧ್ಯಾಹ್ನದ ವೇಳೆಗೆ ಶೇ. 40 ರಷ್ಟು ಮತದಾನವಾಗಿದೆ ಎಂದರು.

ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಒಂದು ಮತದ ಅಂತರದಲ್ಲಿ ಗೆದ್ದರೂ ನಮ್ಮ ಗೆಲುವು ನಮ್ಮದೇ, 50 ಸಾವಿರ ಅಂತರದಿಂದ ಗೆದ್ದರೂ ಗೆಲುವೇ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್, ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಮೊಮ್ಮಕ್ಕಳಾದ ಸಮರ್ಥ್, ಶ್ರೇಷ್ಠ ಮತ್ತಿತರರಿದ್ದರು.

## ಕಾರ್ಯಕರ್ತರ ಶ್ರಮಕ್ಕೆ ಗೆಲುವಿನ ಪ್ರತಿಫಲ ಸಿಗಲಿದೆ : ಎಸ್ಸೆಸ್ಸೆಂ



ದಾವಣಗೆರೆ, ಮೇ 10- ಜಿಲ್ಲೆಯದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಅಭ್ಯರ್ಥಿಗಳ ಪರವಾಗಿ ಶ್ರಮವಹಿಸಿ ದುಡಿದ್ದಾರೆ. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ. ಜಿಲ್ಲೆಯಲ್ಲಿ ನೂರಕ್ಕೆ ನೂರು ಗೆಲುವು ನಿಶ್ಚಿತ ಎಂದು ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಎಂಸಿಸಿ ಬಿ ಬ್ಲಾಕ್ ಐಎಂಎ ಹಾಲ್‌ನಲ್ಲಿನ ಮತಗಟ್ಟೆಯಲ್ಲಿ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಬಿಜೆಯ ಭ್ರಷ್ಟಾಚಾರಕ್ಕೆ ಬೇಸತ್ತ ರಾಜ್ಯದ ಜನತೆ ಈ ಬಾರಿ ಕಾಂಗ್ರೆಸ್ ಬೆಂಬಲಿಸಿದ್ದಾರೆ. 140 ರಿಂದ 150 ಕ್ಕೂ ಹೆಚ್ಚು ಸ್ಥಾನಗಳು ಕಾಂಗ್ರೆಸ್ ಪಕ್ಷಕ್ಕೆ ಲಭಿಸಲಿವೆ ಎಂದರು.

ವಿಜಯನಗರದ ಹರಪನಹಳ್ಳಿ ಸೇರಿದಂತೆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯ ಸಾಧಿಸಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಪುತ್ರ ಸಮರ್ಥ್, ಪಾಲಿಕೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಹಾಗೂ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

## ರಾಜ್ಯದಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ: ಎಸ್.ಎ.ಆರ್.



ದಾವಣಗೆರೆ, ಮೇ 10- ರಾಜ್ಯ ಮತ್ತು ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪ್ರಭಾವ ಹೆಚ್ಚಾಗಿದ್ದು, ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯದಲ್ಲಿ ಬಿಜೆಪಿಗೆ ಬಹುಮತ ಬರಲಿದೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ಶಿರಮಗೊಂಡನಹಳ್ಳಿಯ ಮತಗಟ್ಟೆಯಲ್ಲಿ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿಜೆಪಿ ಆಡಳಿತದಲ್ಲಿ ದೇಶ ಮತ್ತು ರಾಜ್ಯದಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ ಕೆಲಸಗಳು ಆಗಿವೆ. ಜನಪರ ಯೋಜನೆಗಳನ್ನು ರೂಪಿಸಲಾಗಿದ್ದು, ರಾಜ್ಯ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಅಧಿಕ ಬಹುಮತದಿಂದ ಈ ಬಾರಿ ರಾಜ್ಯದಲ್ಲಿ ಬಿಜೆಪಿ ಆಡಳಿತದ ಚುಕ್ಕಾಣಿ ಹಿಡಿಯಲಿದೆ ಎಂದರು.

## ಮತದಾರರ ಒಲವು ಸಾಮಾನ್ಯ ಕಾರ್ಯಕರ್ತನ ಕಡೆಗೆ




ದಾವಣಗೆರೆ, ಮೇ 10- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಾಮಾನ್ಯ ಕಾರ್ಯಕರ್ತನಾದ ನನಗೆ ಮತದಾರರು ಬೆಂಬಲಿಸಿದ್ದಾರೆ. ಬಿಜೆಪಿಗೆ ಒಲವು ಹೆಚ್ಚು ಎಂದು ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಎಂಸಿಸಿ ಎ ಬ್ಲಾಕ್‌ನಲ್ಲಿರುವ ಬಕ್ಕೇಶ್ವರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ತಮ್ಮ ಕುಟುಂಬ ಸಮೇತ ಬಂದು ಮತ ಹಾಕಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನತೆ ಈ ಸಾರಿ ಬದಲಾವಣೆ ಬಯಸಿದ್ದಾರೆ. ಅಧಿಕ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸುತ್ತಾರೆಂಬ ವಿಶ್ವಾಸ ನನ್ನದು. ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳ ಅಭ್ಯರ್ಥಿಗಳಾದ ನಾಗರಾಜ್ ಮತ್ತು ನಾನು ಇಬ್ಬರೂ ಹೊಸಬರು. ಎರಡೂ ಕ್ಷೇತ್ರಗಳ ಮತದಾರರು ನಮಗೆ ಆದ್ಯತೆ ನೀಡಿದ್ದಾರೆಂದು ಹೇಳಿದರು.

ಬಿಜೆಪಿ ವರಿಷ್ಠರು ಈ ಬಾರಿ ಯುವಕರಿಗೆ ಆದ್ಯತೆ ನೀಡುವುದಾಗಿ ಹೇಳಿದ್ದರು. ಅದರಂತೆ 80 ರಿಂದ 90 ಯುವಕರು, ಹೊಸಬರಿಗೆ ಅವಕಾಶ ನೀಡುವ ಮೂಲಕ ತಮ್ಮ ಮಾತನ್ನು ಉಳಿಸಿಕೊಂಡಿದ್ದಾರೆ. ಸಾಮಾನ್ಯ ಕಾರ್ಯಕರ್ತನಾದ ನನಗೆ ಮತ್ತು ಹಿರಿಯ ಶಾಸಕರೊಂದಿಗೆ ಪೈಪೋಟಿ ಇತ್ತು. ಗೆಲ್ಲುವ ವಿಶ್ವಾಸ ಕೂಡ ಇದೆ ಎಂದರು.

## ಉತ್ತರ ಕ್ಷೇತ್ರದಲ್ಲಿ 'ಕಮಲ' ಅರಳಲಿದೆ



ದಾವಣಗೆರೆ, ಮೇ 10- ಪ್ರಚಾರದ ವೇಳೆ ಬಿಜೆಪಿ ಪರ ಅಭೂತಪೂರ್ವ ಬೆಂಬಲ ದೊರೆತಿದ್ದು, ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರು 'ಕಮಲ' ಅರಳಿಸಲಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ಲೋಕಿಕೆರೆ ನಾಗರಾಜ್ ವಿಶ್ವಾಸ ವ್ಯಕ್ತಪಡಿಸಿದರು.

ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿರುವ ರಿಕ್ರಿಯೇಷನ್ ಕ್ಲಬ್‌ನ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವರ ವಿರುದ್ಧ ನನ್ನಂತಹ ಸಾಮಾನ್ಯ ಕಾರ್ಯಕರ್ತರನ್ನು ಬಿಜೆಪಿ ಕಣಕ್ಕಿಳಿಸಿದೆ. ನಮ್ಮ ಪಕ್ಷದಲ್ಲಿ ಕುಟುಂಬ ರಾಜಕಾರಣ ಇಲ್ಲ ಎಂದರು.

ಉತ್ತರ ಕ್ಷೇತ್ರದ ಮತದಾರರು ಪ್ರಬುದ್ಧರಿದ್ದಾರೆ. ಉತ್ತಮರನ್ನೇ ಆಯ್ಕೆ ಮಾಡುತ್ತಾರೆಂಬ ನಂಬಿಕೆ ನನ್ನದು ಎಂದು ಹೇಳಿದರು.

## ಎಸ್‌ಯುಸಿಐ (ಸಿ) ಭಾರತಿ ಮತದಾನ



ದಾವಣಗೆರೆ, ಮೇ 10- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿರುವ ಎಸ್‌ಯುಸಿಐ (ಸಿ) ಪಕ್ಷದ ಅಭ್ಯರ್ಥಿ ಕಾಂ. ಭಾರತಿ ಕೆ. ಅವರು ಮತ ಚಲಾಯಿಸಿದರು.

ದಕ್ಷಿಣ ಕ್ಷೇತ್ರಕ್ಕೆ ಬರುವ ಇವರು ನಗರದ ದುರ್ಗಾಂಬಿಕಾ ಶಾಲೆ ಮತಗಟ್ಟೆಗೆ ತೆರಳಿ ಭಾರತಿ ಬೆಳಗ್ಗೆ 8ಗಂಟೆಗೆ ತಮ್ಮ ಮತ ಚಲಾಯಿಸಿದರು.

ಅಭ್ಯರ್ಥಿ ಭಾರತಿ ಅವರ ಜೊತೆ ಎಸ್‌ಯುಸಿಐ(ಸಿ) ಪಕ್ಷದ ಸದಸ್ಯರಾದ ಡಾ. ವಸುದೆಂದ್ರ, ತಿಪ್ಪೇಸ್ವಾಮಿ, ಮಧು ತೊಗಲೇರಿ, ಅನಿಲ್ ಕುಮಾರ್ ಹಾಗೂ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಬಿ. ಆರ್. ಅಪರ್ಣ ಇದ್ದರು.

## ಭವಿಷ್ಯ ನಿರ್ಧರಿಸಿದ ಮತದಾರ

**(1ನೇ ಪುಟದಿಂದ)** ಚಲಾಯಿಸಿದ್ದಾರೆ.

ಮತ್ತೊಂದೆಡೆ ಹೆರಿಗೆಗೆ ತೆರಳುವುದಕ್ಕೂ ಮುನ್ನ ಮತ ಚಲಾಯಿಸಿ, ಆಸ್ಪತ್ರೆಯಲ್ಲಿ ಮಗು ಹೆತ್ತಿದ್ದಾರೆ.

ಇಂದು ಮತ್ತು ನಾಳೆ ಮಧ್ಯಾಹ್ನದ ನಂತರ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ನೀಡಿದ ವರದಿ ಹಿನ್ನೆಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಧ್ಯಾಹ್ನದ ವೇಳೆಗೆ ಬಿರುಸಿನ ಮತದಾನ ನಡೆದು, ಮಧ್ಯಾಹ್ನ 3 ಗಂಟೆ ವೇಳೆಗೆ ಶೇಕಡ 58 ರಷ್ಟು ಮತದಾನವಾಗಿತ್ತು.

ಈ ಬಾರಿ ಹಿರಿಯ ನಾಗರಿಕರು ಅತೀ ಉತ್ಸಹದಿಂದ ಮತಗಟ್ಟೆಗೆ ಬಂದು ಮತ ಚಲಾಯಿಸಿದರೆ, ಇದೇ ಪ್ರಥಮ ಬಾರಿಗೆ ಮತದಾನದ ಹಕ್ಕು ಪಡೆದ ಯುವ ಜನತೆ ಅದೇ ಉತ್ಸಾಹದಲ್ಲಿ ತಮ್ಮ ಮತ ಚಲಾಯಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಬಿ. ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ತಮ್ಮ ತಮ್ಮ ಮತ ಕ್ಷೇತ್ರಗಳಲ್ಲಿ ಮತ ಚಲಾಯಿಸಿದರು.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತ್ತು ಇತರೆ ರಾಷ್ಟ್ರೀಯ ಪಕ್ಷಗಳು, ಪಕ್ಷೇತರ ಸದಸ್ಯರು ಸೇರಿದಂತೆ 2615 ಅಭ್ಯರ್ಥಿಗಳು ಕಣದಲ್ಲಿದ್ದು, ಅವರ ಭವಿಷ್ಯವನ್ನು ಮತದಾರರು ನಿರ್ಧರಿಸಿದ್ದಾರೆ.

ಮೂರು ರಾಜಕೀಯ ಪಕ್ಷಗಳು ಅಧಿಕಾರದ ಚುಕ್ಕಾಣಿ ಹಿಡಿಯಲು ಹಾತೊರೆಯುತ್ತಿದ್ದು, ಯಾವ ಪಕ್ಷಕ್ಕೆ ಮತದಾರರು ಆಶೀರ್ವಾದ ನೀಡಲಿದ್ದಾರೆ ಎಂಬುದು ಮೇ 13 ರಂದು ಬಹಿರಂಗಗೊಳ್ಳಲಿದೆ. ಅಂದು ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಆಯಾ ತಾಲ್ಲೂಕು, ಜಿಲ್ಲಾ, ಪಾಲಿಕೆ ಕೇಂದ್ರಗಳಲ್ಲಿ ನಡೆಯಲಿದೆ.

ಮತದಾನ ಸಂದರ್ಭದಲ್ಲಿ ಕೆಲವು ಮನಮುಟ್ಟುವ ಘಟನೆಗಳೂ ಜರುಗಿವೆ. ಕುರುಗೋಡು ವಿಧಾನಸಭಾ ಕ್ಷೇತ್ರದಲ್ಲಿ ತುಂಬು ಗರ್ಭಿಣಿ ಕೇಂದ್ರದಲ್ಲಿಯೇ ಸಹಜ ಹೆರಿಗೆ ಆಗಿದೆ. ಆಕೆ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಕೂಡಲೇ ತಾಯಿ ಮತ್ತು ನವಜಾತ ಶಿಶುವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ.

ಮತ ಚಲಾಯಿಸಿ, ಗುರುತು ತೋರಿಸಿದವರಿಗೆ ರಾಜ್ಯದ ಕೆಲವು ಹೋಟೆಲ್‌ಗಳಲ್ಲಿ ಉಚಿತವಾಗಿ ತಿಂಡಿ ವಿತರಣೆ ಮಾಡಲಾಗಿದೆ. ಕೆಲವೆಡೆ ತಾಂತ್ರಿಕ ದೋಷದಿಂದ ವಿದ್ಯುನ್ಮಾನ ಯಂತ್ರಗಳು ಬದಲಾವಣೆ ಮಾಡಿದರೆ, ಮತ್ತೆ ಕೆಲವೆಡೆ ಕಾರ್ಯಕರ್ತರು ಸಿಕ್ಕಿಬಿದ್ದ ಮತಯಂತ್ರವನ್ನೇ ಒಡೆದು ಹಾಕಿದ್ದಾರೆ.

## ಚುನಾವಣೆಗಳು ಸಹ ಹಬ್ಬದಂತೆ ಆಚರಣೆಯಾದಾಗ ಯಶಸ್ಸು ಸಾಧ್ಯ



ದಾವಣಗೆರೆ, ಮೇ 10- ಚುನಾವಣೆಯನ್ನು ಹಬ್ಬದಂತೆ ಆಚರಿಸಿದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಶಸ್ಸು ಕಾಣಲು ಸಾಧ್ಯ. ಮತದಾನ ಸಂವಿಧಾನ ನೀಡಿರುವ ಹಕ್ಕು ಪ್ರತಿಯೊಬ್ಬರೂ ಅದನ್ನು ಚಲಾಯಿಸಲೇ ಬೇಕು ಎಂದು ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿಗಳಾದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು. ನಗರದ ಕಾಯಿಪೇಟೆಯ ಜೀಜಾಮಾತಾ ಶಾಲೆಯ ಮತಗಟ್ಟೆಯಲ್ಲಿ ಮತದಾನ ಮಾಡಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದರು.

ನಗರ ದೇವತೆ ಹಬ್ಬ ಎರಡು ವರ್ಷಗಳಿಗೊಮ್ಮೆ ಬರುತ್ತದೆ. ಉಳಿದಂತೆ ಎಲ್ಲಾ ಹಬ್ಬಗಳನ್ನು ಪ್ರತಿ ವರ್ಷ ಸಂಭ್ರಮದಿದ ಆಚರಿಸುತ್ತಾ ಬರುತ್ತೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿ ಐದು ವರ್ಷಗಳಿಗೊಮ್ಮೆ ಬರುವ ವಿಧಾನಸಭಾ ಚುನಾವಣೆಯ ಹಬ್ಬವನ್ನೂ ಸಹ ಸಡಗರ, ಸಂಭ್ರಮದಿಂದ ಆಚರಿಸಬೇಕು. ತನ್ಮೂಲಕ ಸಮರ್ಥ ನಾಯಕನ ಆಯ್ಕೆ ಮಾಡುವ ಅಧಿಕಾರ ಮತದಾರರಿಗೆ ಇರುತ್ತದೆ ಎಂದರು.

ಉತ್ತಮ ವ್ಯಕ್ತಿ ಆಯ್ಕೆಯಾದರೆ ಕ್ಷೇತ್ರ ಕೂಡ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ಹೇಳಿದರು.

## ಮೊದಲ ಸಲ ಮತದಾನದ ಉತ್ಸಾಹ, ಇಳಿ ವಯಸ್ಸಲ್ಲೂ ಹುಮ್ಮಸ್ಸು

ದಾವಣಗೆರೆ, ಮೇ 10 - ಮೊದಲ ಬಾರಿ ಹಕ್ಕು ಚಲಾಯಿಸಲು ಆಗಮಿಸಿದವರಲ್ಲಿ ಉತ್ಸಾಹ, ಇಳಿವಯಸ್ಸಿನಲ್ಲೂ ಮತಗಟ್ಟೆಗಳಿಗೆ ಬಂದವರಲ್ಲಿ ಹುಮ್ಮಸ್ಸು. ಅಂಗವೈಕಲ್ಯದ ನಡುವೆಯೂ ಹಕ್ಕು ಚಲಾಯಿಸಲು ಬಂದವರಲ್ಲಿ ನಿರೀಕ್ಷೆಗಳು...

ಹೌದು, ಜಿಲ್ಲೆಯಾದ್ಯಂತ ಬುಧವಾರ ನಡೆದ ವಿಧಾನ ಸಭಾ ಚುನಾವಣೆಗೆ ತಮ್ಮ ಮುಂದಿನ ವಾರಸುದಾರರನ್ನು ಆಯ್ಕೆ ಮಾಡಲು ಜನರು ಉತ್ಸಾಹದಿಂದಲೇ ಮತಗಟ್ಟೆಗಳಿಗೆ ಆಗಮಿಸಿ, ಹಕ್ಕು ಚಲಾಯಿಸಿದರು.

ಅಂಗವಿಕಲರಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ನೆರವು ಕಲ್ಪಿಸಲು ರ್‍ಯಾಂಪ್ ವ್ಯವಸ್ಥೆಯ ಜೊತೆಗೆ ಪಿಡಬ್ಲ್ಯೂಡಿ ಮತಗಟ್ಟೆ, ಯುವ ಮತದಾರರ ಸೆಳೆಯಲು ಯುವ ಮತಗಟ್ಟೆ, ಮಹಿಳೆಯರನ್ನು ಮತಗಟ್ಟೆಗಳ ಕಡೆಗೆ ಸೆಳೆಯಲು 'ಪಿಂಕ್ ಬೂತ್' ಎಂದೇ ಹೆಸರಾಗಿರುವ 'ಸಖಿ' ಮತಗಟ್ಟೆಗಳು ಈ ಬಾರಿಯ ವಿಶೇಷವಾಗಿದ್ದವು.

ದಾವಣಗೆರೆ, ಮಾಯಕೊಂಡ, ಜಗಳೂರು ಕ್ಷೇತ್ರಗಳಿಗೆ ಪತ್ರಕರ್ತರು ಭೇಟಿ ನೀಡಿದಾಗ, ಯುವಕರು,







ಹಿರಿಯರು, ಅಂಗವಿಕಲರು ಉತ್ಸಾಹದಿಂದ ಮತದಾನದಲ್ಲಿ ಪಾಲ್ಗೊಂಡಿದ್ದು ಕಂಡು ಬಂತು.

ಮಧ್ಯಾಹ್ನ ಬಿಸಿಲಿನ ಹಿನ್ನೆಲೆಯಲ್ಲಿ ಮತದಾನ ತುಸು ಮಂದಗತಿಯಲ್ಲಿತ್ತು. ಜೊತೆಗೆ ಕೆಲ ಹೊತ್ತು ಸುರಿದ ಮಳೆಯಿಂದಾಗಿ ಮತದಾನಕ್ಕೆ ಅಡೆತಡೆ ಉಂಟಾಗಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಮತ್ತೆ ಮತದಾರರು ಮತಗಟ್ಟೆಗಳಿಗೆ ಆಗಮಿಸಿದರು.

ಬೇತೂರು ಗ್ರಾಮದಲ್ಲಿ ಬೆಳಿಗ್ಗೆ 11.20ರ ವೇಳೆಗೆ ಮತದಾರರು ಸರದಿ ಸಾಲಿನಲ್ಲಿ ನಿಂತು ಹಕ್ಕು ಚಲಾಯಿಸುತ್ತಿದ್ದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ 21ರಲ್ಲಿ 1485 ಮತದಾರರ ಪೈಕಿ 402 ಮತದಾರರು ಮತ ಚಲಾಯಿಸಿ ಆಗಿತ್ತು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಅಣಜಿ ಗ್ರಾಮದ ಹೆಚ್.ವಿ.ಎಸ್.ಪಿ. ಕಾಲೇಜಿನ ಮತಗಟ್ಟೆ ಸಂಖ್ಯೆ 17ರಲ್ಲೂ ಮತದಾರ ಉತ್ಸಾಹ ಕಂಡು ಬಂತು. ಮತಗಟ್ಟೆ ಬಳಿ ಇದ್ದ ಜೆಡಿಎಸ್‌ನ ಅಭ್ಯರ್ಥಿ ಆನಂದಪ್ಪ ಗೆಲುವು ನನ್ನದೇ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಳಿಚೋಡು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮತಗಟ್ಟೆ 164ರಲ್ಲಿ 894 ಜನರ ಪೈಕಿ 333 ಜನರು ಮತ ಚಲಾಯಿಸಿದ್ದರು.

ಮಧ್ಯಾಹ್ನ 1 ಗಂಟೆ ಸುಮಾರಿಗೆ ಮಾಯಕೊಂಡ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮತಗಟ್ಟೆಯಲ್ಲಿ ಶೇ.41ರಷ್ಟು ಮತದಾನವಾಗಿತ್ತು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಮಾಯಕೊಂಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್. ಬಸವಂತಪ್ಪ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಕ್ಷೇತ್ರದಲ್ಲಿ ಎಲ್ಲಾ ಮತದಾರರು ಕಾಂಗ್ರೆಸ್ ಪರ ಇದ್ದಾರೆ. ಸ್ಪರ್ಧೆ ಏನಿದ್ದರೂ ಬಿಜೆಪಿ ಹಾಗೂ ನನ್ನ ನಡುವೆ. ಪಕ್ಷೇತರ ಅಭ್ಯರ್ಥಿಗಳು ನನಗೆ ಲೆಕ್ಕಕ್ಕಿಲ್ಲ ಎಂದ ಅವರು, ಗೆಲುವು ನನ್ನದೇ ಎಂದರು.

## ಹಡಗಲಿ : ಶೇ 74 ಶಾಂತಿಯುತ ಮತದಾನ

ಹೂವಿನಹಡಗಲಿ, ಮೇ 10- ಹೂವಿನಹಡಗಲಿ ವಿಧಾನಸಭಾ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಇಂದು ಕ್ಷೇತ್ರದಾದ್ಯಂತ ಶಾಂತಿಯುತ ಮತದಾನವಾಗಿದೆ.

ಆರಂಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಪರವಾಗಿರುವ ಮತದಾರರು ಮತ ಕೇಂದ್ರಕ್ಕೆ ತೆರಳಿ ಪೂಜೆಯನ್ನು ಸಲ್ಲಿಸಿದರು.

ಬೆಳಗ್ಗೆಯಿಂದ ಮಧ್ಯಾಹ್ನದವರಿಗೆ ಏರುಗತಿಯಲ್ಲಿ ಮತದಾನ ಪ್ರಕ್ರಿಯೆ ಶುರುವಾಗಿದ್ದು, ನಂತರ ಸ್ವಲ್ಪ ಕುಂದಿದಂತೆ ಕಂಡುಬಂದಿತು. ಭಾರೀ ಬಿಸಿಲಿನ ಝುಳಕ್ಕೆ ಮತದಾರರು ಮನೆಯಿಂದ ಹೊರಬರದೆ ನಾಲ್ಕು ಗಂಟೆಯ ನಂತರ ಮತ ಕೇಂದ್ರಕ್ಕೆ ಭೇಟಿ ಕೊಡುತ್ತಿರುವುದು ಕಂಡುಬಂತು.

ಬಿಜೆಪಿ ಅಭ್ಯರ್ಥಿ ಕೃಷ್ಣ ನಾಯಕ ತಮ್ಮ ಸ್ವಗ್ರಾಮ ಕೋಯಿಲಾರಗಟ್ಟೆ ತಾಂಡಾದ ಮತಗಟ್ಟೆಯಲ್ಲಿ ಮತವನ್ನು ಚಲಾಯಿಸಿದರು.

ಪಿ.ಟಿ. ಪರಮೇಶ್ವರ ನಾಯ್ಕ್ ಪಟ್ಟಣದ





### ಬಿಜೆಪಿ- ಕಾಂಗ್ರೆಸ್ ನಡುವೆ ನೇರ ಹಣಾಹಣಿ

ಸೊಪ್ಪಿನ ಕಾಳಮ್ಮ ಶಾಲೆಯ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಸಹಜವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಕಂಡುಬಂದಿತು. ಆದರೆ ಜೆಡಿಎಸ್, ಕೆ.ಆರ್. ಪಿ.ಪಿ, ಕೆ.ಆರ್.ಎಸ್, ಎ.ಎ.ಪಿ. ಪಕ್ಷಗಳ ಅಭ್ಯರ್ಥಿಗಳು ಎಲ್ಲೂ ಕಂಡು ಬರಲಿಲ್ಲ.ಹಡಗಲಿ ಕ್ಷೇತ್ರದ ಪ್ರಥಮ ಮತಗಟ್ಟೆಯಾದ ಅಲ್ಲಿಪುರದಿಂದ ಮತದಾನ ಪ್ರಕ್ರಿಯೆ ಮುಂದುವರೆಯಿತು.

ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಬೆಂಬಲಿಗರು, ಕಾರ್ಯಕರ್ತರು ಯಾರು ಗೆಲ್ಲುತ್ತಾರೆ ಎಂಬ ಬಗ್ಗೆ ಚರ್ಚೆ ನಡೆಸಿದ್ದಾರೆ. 13ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯ ಪ್ರೌಢದೇವರಾಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮತ ಎಣಿಕೆ ನಡೆಯಲಿದೆ.

## ಜಗಳೂರು ಕ್ಷೇತ್ರದಲ್ಲಿ ಶೇ. 82 ಮತದಾನ

ಜಗಳೂರು, ಮೇ 10- ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇಂದು ನಡೆದ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ಅಂತ್ಯಗೊಂಡಿದೆ.

ಬಹುತೇಕ ಗ್ರಾಮೀಣ ಪ್ರದೇಶದ ಮತಗಟ್ಟೆಗಳಲ್ಲಿ ಬೆಳಗಿನ ಸಮಯದಲ್ಲಿ ನೀರಸವಾಗಿದ್ದ ಮತದಾನ ಪ್ರಕ್ರಿಯೆ ಮಧ್ಯಾಹ್ನ 3 ಗಂಟೆ ನಂತರ ಬಿರುಸಿನ ಮತದಾನವಾಗಿದೆ.

ಬಿಳಿಚೋಡು ಮತ್ತು ದೊಣೆಹಳ್ಳಿ ಗ್ರಾಮದ ಮತಗಟ್ಟೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಆಗಮಿಸಿದ್ದರಿಂದ ಆರು ಗಂಟೆ ನಂತರವೂ ಮತದಾನ ನಡೆಯಿತು.

ತಾಲ್ಲೂಕಿನ ಹನುಮಂತಪುರ ಗೊಲ್ಲರಹಟ್ಟಿ ಗ್ರಾಮದ ಮತಗಟ್ಟೆಯಲ್ಲಿ ಮತಯಂತ್ರ ದೋಷದಿಂದ ಸ್ವಲ್ಪ ಸಮಯ ಮತದಾನದಲ್ಲಿ







ವ್ಯತ್ಯಯವಾಗಿ ತಕ್ಷಣವೇ ಅಧಿಕಾರಿಗಳು ಸರಿಪಡಿಸಿ ಮತದಾನ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮುಂದುವರೆಸಿದರು.

ಬಿಜೆಪಿ ಅಭ್ಯರ್ಥಿ ಶಾಸಕ ಎಸ್.ವಿ. ರಾಮಚಂದ್ರ, ದಾವಣಗೆರೆ ಮಹಿಳಾ ಸೇವಾ ಸಮಾಜದ ಮತಗಟ್ಟೆಯಲ್ಲಿ, ಕಾಂಗ್ರೆಸ್ ಅಭ್ಯರ್ಥಿ ದೇವೇಂದ್ರಪ್ಪ ಬಿ, ಸ್ವಗ್ರಾಮ ಚಿಕ್ಕಮ್ಮನಹಟ್ಟಿಯಲ್ಲಿ ಮತ್ತು ಪಕ್ಷೇತರ ಅಭ್ಯರ್ಥಿ ಮಾಜಿ ಶಾಸಕ ಎಚ್. ಪಿ. ರಾಜೇಶ್ ಸ್ವಗ್ರಾಮ ಬಿದರಕೆರೆಯಲ್ಲಿ ಮತಗಟ್ಟೆಯಲ್ಲಿ ಸರದಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು.

ಕ್ಷೇತ್ರದ 29 ಗ್ರಾಪಂ 1 ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 97,690 ಗಂಡು, 95,257 ಹೆಣ್ಣು ಮತ್ತು ಇತರೆ 11 ಸೇರಿದಂತೆ 1,92,958 ಮತದಾರರಿದ್ದು, ಒಟ್ಟು 262 ಬೂತ್‌ಗಳಿಗೆ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. 128 ಮತಗಟ್ಟೆಗಳಲ್ಲಿ ವೆಬ್ ಕ್ಯಾಮೆರಾ ಅಳವಡಿಸಲಾಗಿತ್ತು.

ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಡಿಮಸ್ಟರಿಂಗ್ ನಡೆದು ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಭದ್ರತೆಯೊಂದಿಗೆ ಜಿಲ್ಲಾ ಕೇಂದ್ರಕ್ಕೆ ರವಾನಿಸಲಾಗುವುದು. ಮೇ 13 ರಂದು ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದೆ.

## ಟ್ರಾಫಿಕ್ ಕ್ಯಾಮರಾದಿಂದ ಕೌಟುಂಬಿಕ ಕಲಹ

### ಗೆಳತಿಯೊಂದಿಗೆ ಸ್ಕೂಟರ್‌ನಲ್ಲಿ ಹೋಗುವಾಗ ಪತ್ನಿಗೆ ಸಿಕ್ಕಿ ಬಿದ್ದ

ತಿರುವನಂತಪುರಂ, ಮೇ 10 - ಕೇರಳದ ರಸ್ತೆಗಳಲ್ಲಿ ಸ್ಥಾಪಿಸಲಾಗಿರುವ ಸುರಕ್ಷತಾ ಕ್ಯಾಮರಾಗಳಿಂದಾಗಿ, ವ್ಯಕ್ತಿಯೋರ್ವ ತನ್ನ ಗೆಳತಿಯ ಜೊತೆ ಹೋಗುವಾಗ ಸಿಕ್ಕಿ ಬಿದ್ದ ಘಟನೆ ನಡೆದಿದೆ. ಇದು ಆತನ ಸಂಸಾರದಲ್ಲಿ ಬಿರುಗಾಳಿಗೆ ಕಾರಣವಾಗಿದೆ.

ಇಡುಕ್ಕಿ ಮೂಲದ ವ್ಯಕ್ತಿಯೊಬ್ಬರು ಕಳೆದ ಏಪ್ರಿಲ್ 25ರಂದು ಹೆಲ್ಮೆಟ್ ಇಲ್ಲದೇ ಗೆಳತಿಯ ಜೊತೆ ಸ್ಕೂಟರ್‌ನಲ್ಲಿ ತೆರಳಿದ್ದರು.


ವಾಹನ ಪತ್ನಿಯ ಹೆಸರಿನಲ್ಲಿತ್ತು. ಹೀಗಾಗಿ ಪೊಲೀಸರು ಸಂಚಾರಿ ನಿಯಮ ಉಲ್ಲಂಘನೆಗಾಗಿ ದಂಡ ಪಾವತಿಸುವಂತೆ ಪತ್ನಿಯ ಮೊಬೈಲ್‌ಗೆ ಚಿತ್ರ ಸಮೇತ ಚಲನ್ ಕಳಿಸಲಾಗಿತ್ತು.

ವಾಹನದಲ್ಲಿರುವ ಮಹಿಳೆ ಯಾರು ಎಂದು ಪತ್ನಿ ಗಂಡನನ್ನು ಪ್ರಶ್ನಿಸಿದ್ದಾಳೆ. ಆ ಮಹಿಳೆ ಯಾರೆಂಬುದು ಗೊತ್ತಿಲ್ಲ ಎಂದು ಪತಿ ಹೇಳಿದ್ದಾನೆ. ಇದು ಪತಿ- ಪತ್ನಿಯರ ನಡುವೆ ಜಗಳಕ್ಕೆ ಕಾರಣವಾಗಿದೆ. ನಂತರ ಮೇ 5ರಂದು ಕರಮನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಪತ್ನಿ, ತನ್ನ ಹಾಗೂ ಮೂರು ವರ್ಷದ ಮಗುವಿನ ಮೇಲೆ ಗಂಡ ಹಲ್ಲೆ ನಡೆಸಿದ್ದಾನೆ ಎಂದು ಹೇಳಿದ್ದಾರೆ.

ಕ್ರಮ ತಗೆದುಕೊಂಡ ಪೊಲೀಸರು ಗಂಡನನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರು ಪಡಿಸಿದ್ದಾರೆ. ಆತನನ್ನು ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ.

ರಸ್ತೆ ಸುರಕ್ಷತೆ ಹೆಸರಿನಲ್ಲಿ ಅಳವಡಿಸಲಾಗಿರುವ ಕ್ಯಾಮರಾಗಳು ಈಗಾಗಲೇ ರಾಜ್ಯದಲ್ಲಿ ತೀವ್ರ ರಾಜಕೀಯ ವಿವಾದಕ್ಕೆ ಕಾರಣವಾಗಿವೆ.

ಆಡಳಿತಾರೂಢ ಸರ್ಕಾರ ಸಿ.ಸಿ.ಟಿ.ವಿ. ವಿಷಯದಲ್ಲಿ ಭ್ರಷ್ಟಾಚಾರ ಮಾಡಿದೆ ಎಂದು ಪ್ರತಿಪಕ್ಷವಾದ ಕಾಂಗ್ರೆಸ್ ಆರೋಪಿಸಿದೆ. ಸಂಚಾರಿ ಕ್ಯಾಮರಾ ಈಗ ರಾಜಕೀಯದ ಜೊತೆಗೆ ಕೌಟುಂಬಿಕ ಕೋಲಾಹಲಕ್ಕೂ ಕಾರಣವಾಗಿದೆ.


DO YOU HAVE DIABETES ?
ನಿಮಗೆ ಡಯಾಬಿಟಿಸ್ ಇದೆಯೇ ?

DIABETES & DIET COUNSELLING CAMP
ಡಯಾಬಿಟಿಸ್ ಮತ್ತು ಆಹಾರ ಪದ್ಧತಿ ತಿಳುವಳಿಕೆ

* FREE Fasting Blood Sugar Test
* FREE Consultation
* FREE Diet Counselling
* Glucometer at attractive price

HbA1c Test at 50% off.

WALK IN AND GET YOURSELF TESTED

11th to 17th May, 2023

Blood Test / ರಕ್ತ ಪರೀಕ್ಷೆ : 6:00 am to 9:00am | Consultation / ಸಮಾಲೋಚನೆ : 9:00 am to 12:00pm

For Registration Call 758-00-758-66

ವಿಶ್ವಾಸ್ ಲೈಫ್ ಕೇರ್
VISHWAS LIFE CARE
#298, Vidyarthi Bhavan Circle , Hadadi Road, DAVANAGERE -02.

# ಕರುಣಾ ಟ್ರಸ್ಟ್ ಸೇವೆ ಶ್ಲಾಘನೀಯ



ದಾವಣಗೆರೆ, ಮೇ 10- ಬಿಸಿಲಿನ ಬೇಗೆಯಿಂದ ಬಳಲಿದ ಜನರ ದೇಹ ತಣಿಸಲು ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಮಜ್ಜಿಗೆ ವಿತರಣಾ ಕಾರ್ಯ ಶ್ಲಾಘನೀಯ ಎಂದು ಶ್ರೀಮತಿ ಆರ್. ಕಲಾ ಭೀಮಾನಂದ ಹೇಳಿದರು.

ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಮಜ್ಜಿಗೆ ವಿತರಣೆಯ ಪ್ರಯುಕ್ತ ಮೊನ್ನೆ ಹಮ್ಮಿಕೊಂಡಿದ್ದ ಕೃತಜ್ಞತಾ ಸಮರ್ಪಣಾ ಸಮಾರಂಭದಲ್ಲಿ ಮಾತನಾಡಿದರು.

ದಾವಣಗೆರೆಯ ಬಿರು ಬಿಸಿಲಿನಲ್ಲಿ ದೇಹ ನಿರ್ಜಲೀಕರಣ (ಡಿ ಹೈಡ್ರೇಶನ್)ದಿಂದ ಪ್ರಾಣಾಪಾಯವಾಗುವ ಸಾಧ್ಯತೆ ಇರುವ ಕಾರಣ ಈ ಸಂದರ್ಭದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಉಚಿತ ಮಜ್ಜಿಗೆ ವಿತರಣೆ ಮಾಡಿ, ನಿರ್ಜಲೀಕರಣಕ್ಕೆ ಪರಿಹಾರ ನೀಡಿರುವುದು ಉತ್ತಮ ಕಾರ್ಯ ಎಂದರು.

ಶ್ರೀಮತಿ ಮಂಜುಳಾ ಬಸವಲಿಂಗಪ್ಪ ಮಾತನಾಡಿ, ಒಂದು ತಿಂಗಳ ಕಾಲ ಮಜ್ಜಿಗೆಯ ತಯಾರಿ ಮಾಡುವುದು, ಅದಕ್ಕೆ ನೆರವಾದ ದಾನಿಗಳ ಸೇವೆಯನ್ನು ಸ್ಮರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಎಂ. ಬಸವರಾಜ್ ಅವರು, ಕರುಣಾ ಟ್ರಸ್ಟಿನ ಸತ್ಕಾರ್ಯಗಳನ್ನು ಶ್ಲಾಘಿಸುವುದರ ಜೊತೆಗೆ ಮಜ್ಜಿಗೆಯ ಮಹತ್ವ ತಿಳಿಸಿದರು.

ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಕರುಣಾ ಟ್ರಸ್ಟಿನ ಸತ್ಕಾರ್ಯಗಳಿಗೆ ಕೈ ಜೋಡಿಸುವಲ್ಲಿ ದಾನಿಗಳು ಸಹಕರಿಸಬೇಕಾಗಿ ವಿನಂತಿಸಿದರು.

ಸತತ ಒಂದು ತಿಂಗಳು ಉಚಿತವಾಗಿ ಮಜ್ಜಿಗೆಯನ್ನು ಒದಗಿಸಿದ ಹೊನ್ನೂರಿನ ಶ್ರೀಪಥ್ ರಾಜ್, ಜಯಪ್ರಕಾಶ್, ಆಟೋ ಅಣ್ಣಪ್ಪನವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಮಂಜುಳಾ ಬಸವಲಿಂಗಪ್ಪ ಸ್ವಾಗತಿಸಿದರು. ನಿರ್ದೇಶಕ ಎನ್.ಪಿ.ಜಯ್ಯಣ್ಣ ವಂದಿಸಿದರು.

# ಮಲೇಬೆನ್ನೂರಿನಲ್ಲಿ ಶೇ.83.40 ರಷ್ಟು ಮತದಾನ



ಮಲೇಬೆನ್ನೂರು, ಮೇ 10- ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬುಧವಾರ ನಡೆದ ಹರಿಹರ ವಿಧಾನಸಭಾ ಕ್ಷೇತ್ರದ ಚುನಾವಣೆ ಬಹುತೇಕ ಶಾಂತಿಯುತವಾಗಿತ್ತು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಎಲ್ಲಾ ಕಡೆ ಬಿರುಸಿನ ಮತದಾನ ನಡೆಯಿತು. ಮಲೇಬೆನ್ನೂರು ಪಟ್ಟಣದಲ್ಲಿ 17490 ಮತದಾರರ ಪೈಕಿ 14581 ಮತದಾರರು ಮತದಾನ ಮಾಡಿದ್ದು, ಶೇ.83.40 ರಷ್ಟು ಮತದಾನ ನಡೆದಿದೆ.

ಪಟ್ಟಣದಲ್ಲಿ ಈ ಬಾರಿ 21 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಮತಗಟ್ಟೆ ಸಂಖ್ಯೆ 193 ರಲ್ಲಿ ಅತಿ ಹೆಚ್ಚು ಶೇ.89.81 ರಷ್ಟು ಮತದಾನವಾಗಿದ್ದರೆ, ಮತಗಟ್ಟೆ ಸಂಖ್ಯೆ 196 ರಲ್ಲಿ ಶೇ.69 ರಷ್ಟು ಕಡಿಮೆ ಮತದಾನವಾಗಿದೆ.

ಪುರಸಭೆ ಎದುರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಮತ್ತು ಆಶ್ರಯ ಕಾಲೋನಿಯ ಮತಗಟ್ಟೆಯಲ್ಲಿ ಮತಯಂತ್ರದ ಬ್ಯಾಟರಿ ಲೋ ಆಗಿದ್ದರಿಂದ ಸ್ವಲ್ಪ ಹೊತ್ತು ಮತದಾನಕ್ಕೆ ತೊಂದರೆ ಉಂಟಾಗಿ ಮತದಾರರು ಬಿಸಿಲಿನಲ್ಲಿ ಕಾಯುವಂತಾಯಿತು. ಬ್ಯಾಟರಿ ಬದಲಾವಣೆ ಮಾಡಿದ ನಂತರ ಎರಡೂ ಕಡೆ ಮತ್ತೆ ಮತದಾನ ನಡೆಯಿತು.

ಪಟ್ಟಣದ ಎರಡು ವಾರ್ಡ್‌ಗಳಲ್ಲಿ ಕಾಂಗ್ರೆಸ್-ಜೆಡಿಎಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು, ಕೈ ಕೈ ಮಿಲಾಯಿಸುವ ಹಂತ ತಲುಪಿದಾಗ ಪೊಲೀಸರು ಮಧ್ಯ ಪ್ರವೇಶಿಸಿ, ಪರಿಸ್ಥಿತಿ ತಿಳಿಗೊಳಿಸಿದರು. ನಂತರ ಈ ಎರಡೂ ವಾರ್ಡ್‌ಗಳಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು ಎಂದು ಪಿಎಸ್ಐ ಪ್ರಭು ಕೆಳಗಿಮನಿ ತಿಳಿಸಿದರು.

ಇದನ್ನು ಹೊರತು ಪಡಿಸಿದರೆ, ಇನ್ನುಳಿದ ಕಡೆ ಮತ್ತು ಹಳ್ಳಿಗಳಲ್ಲಿ ಸಂಪೂರ್ಣ ಶಾಂತಿಯುತ ಮತದಾನ ನಡೆದಿದೆ. ಮಲೇಬೆನ್ನೂರು ಸೇರಿದಂತೆ ಎಲ್ಲಾ ಮತಗಟ್ಟೆಗಳಿಗೆ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್, ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್, ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಭೇಟಿ ನೀಡಿ, ಕಾರ್ಯಕರ್ತರಿಂದ ಮತದಾನದ ವಿವರ ಪಡೆದರು.

ಜಿಗಳಿಯಲ್ಲಿ 2996ಕ್ಕೆ 2509, ಕುಂಬಳೂರಿನಲ್ಲಿ 3080ಕ್ಕೆ 2745, ನಿಟ್ಟೂರಿನಲ್ಲಿ 1907ಕ್ಕೆ 1569, ಬೂದಿಹಾಳ್‌ನಲ್ಲಿ 1215ಕ್ಕೆ 1068, ಭಾನುವಳ್ಳಿಯಲ್ಲಿ 6984ಕ್ಕೆ 6145, ಹೊಳೆಸಿರಿಗೆರೆಯಲ್ಲಿ 4579ಕ್ಕೆ 3814, ಕೆ. ಎನ್.ಹಳ್ಳಿಯಲ್ಲಿ 2698ಕ್ಕೆ 2320, ಕೊಕ್ಕನೂರಿನಲ್ಲಿ 521ಕ್ಕೆ 453, ಜಿ. ಬೇವಿನಹಳ್ಳಿಯಲ್ಲಿ 2088ಕ್ಕೆ 1826, ಕೊಮಾರನಹಳ್ಳಿಯಲ್ಲಿ 1424ಕ್ಕೆ 1204 ಮತದಾರರು ಮತದಾನ ಮಾಡಿದ್ದಾರೆ.

ಎಲ್ಲಾ ಮತಗಟ್ಟೆಗಳಿಗೆ ಪೊಲೀಸರ ಜೊತೆ ವಿವಿಧ ಪಡೆಗಳ ಸೈನಿಕರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

## ಸಾಣೇಹಳ್ಳಿಯ ಪ್ರೌಢಶಾಲೆಗೆ ಶೇ. 98.03 ಫಲಿತಾಂಶ

ಸಾಣೇಹಳ್ಳಿ, ಮೇ 10- ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಇಲ್ಲಿನ ಶ್ರೀ ಗುರುಪಾದೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಪರೀಕ್ಷೆಗೆ 51 ವಿದ್ಯಾರ್ಥಿಗಳು ಕುಳಿತುಕೊಂಡಿದ್ದು, ಶೇ. 98.03 ರಷ್ಟು ಫಲಿತಾಂಶ ಬಂದಿದೆ. ಶಾಲೆಗೆ 606 ಅಂಕ ಗಳಿಸಿದ ರಚನಾ ಎ. ಎಸ್. ಪ್ರಥಮ, 584 ಅಂಕ ಗಳಿಸಿದ ತನುಜ ಎಂ ಯು. ದ್ವಿತೀಯ ಹಾಗೂ 577 ಅಂಕ ಗಳಿಸಿರುವ ಪವನ್ ಎನ್. ತೃತೀಯ ಸ್ಥಾನ ಪಡೆದಿದ್ದಾರೆ.

ಶ್ರೀ ಗುರುಪಾದೇಶ್ವರ ಕನ್ನಡ ಮಾಧ್ಯಮ ಪ್ರೌಢಶಾಲೆಗೆ ಶೇ. 94.4 ರಷ್ಟು ಫಲಿತಾಂಶ ಬಂದಿದೆ. ಶಾಲೆಗೆ 585 ಅಂಕ ಗಳಿಸಿದ ನಿಂಗಣ್ಣ ಪ್ರಥಮ, 568 ಅಂಕ ಗಳಿಸಿದ ನಂದಿನಿ ಬಿ. ದ್ವಿತೀಯ, 536 ಅಂಕ ಗಳಿಸಿದ ಸಂಜಯ್ ಎಸ್.ಬಿ. ತೃತೀಯ ಸ್ಥಾನ ಪಡೆದಿದ್ದಾರೆ.

ಹಿಂದಿ ವಿಷಯದಲ್ಲಿ ರಚನಾ ಎ. ಎಸ್., ನಿಂಗಣ್ಣ, ನಂದಿನಿ .ಬಿ. ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿದ್ದಾರೆ.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಕ್ರಿಯಿಸಿ, ಇಲ್ಲಿನ ಶಿಕ್ಷಕರ ನಿರಂತರ ಪ್ರಯತ್ನದಿಂದಾಗಿ ಉತ್ತಮ ಫಲಿತಾಂಶ ಬರುವಂತಾಗಿದೆ. ಶ್ರಮವಹಿಸಿದ ವಿದ್ಯಾರ್ಥಿಗಳು ಮತ್ತು ನೌಕರರು ಅಭಿನಂದನಾರ್ಹರು ಎಂದಿದ್ದಾರೆ.

## ಹಣದ ಕೊರತೆಯಿಂದ 25 ಕ್ಷೇತ್ರಗಳಲ್ಲಿ ಜೆಡಿಎಸ್ ಹಿನ್ನಡೆ : ಕುಮಾರಸ್ವಾಮಿ



ಬಿಡದಿ, ಮೇ 10 - ಹಣದ ಕೊರತೆಯಿಂದಾಗಿ ಕನಿಷ್ಠ 25 ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಹಿನ್ನಡೆಯಾಗಿದೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೇತಗಾನಹಳ್ಳಿ ಗ್ರಾಮದ ಮತಗಟ್ಟೆಯಲ್ಲಿ ಮತದಾನ ಮಾಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಗೌರಿಬಿದನೂರು, ಅಫ್ಜಲ್‌ಪುರ, ಸೇಡಂ, ನವಲಗುಂದ, ರಾಯಭಾಗ, ಕುಡಚಿ, ರಾಯಚೂರು ಗ್ರಾಮೀಣ, ಕೊಪ್ಪಳ, ಸಿಂದಗಿ ಸೇರಿದಂತೆ ಕನಿಷ್ಠ 25 ಕ್ಷೇತ್ರಗಳಲ್ಲಿ ಹಣದ ಕೊರತೆಯಿಂದಾಗಿ ನಮಗೆ ಹಿನ್ನಡೆ ಆಗಿದೆ ಎಂದರು.

ಉತ್ತರ ಕರ್ನಾಟಕದ ಹಲವು ಕಡೆಗಳಲ್ಲೂ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಿದ್ದರು. ಕೊನೆಯ ಹಂತದಲ್ಲಿ ಪಾರ್ಟಿ ಫಂಡ್ ವಿಚಾರದಲ್ಲಿ ನಾವು ಅಭ್ಯರ್ಥಿಗಳ ನಿರೀಕ್ಷೆ ಮುಟ್ಟಲು ಆಗಿಲ್ಲ ಎಂದರು.

50-60 ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಉತ್ತಮ ಹೋರಾಟ ತೋರಿದ್ದಾರೆ, ಆದರೆ ನಿರೀಕ್ಷೆಗೆ ಅನುಗುಣವಾಗಿ ಪಕ್ಷದ ನಿಧಿ ಕೊಡಲು ಸಾಧ್ಯವಾಗಿಲ್ಲ ಎಂದವರು ವಿಷಾದಿಸಿದ್ದಾರೆ.

## ಮತಗಟ್ಟೆ ಆವರಣದಲ್ಲೇ ಇಬ್ಬರ ಸಾವು

(1ನೇ ಪುಟದಿಂದ) ಲೋ ಬಿಪಿಯಿಂದ ಕುಸಿದು ಬಿದ್ದು ನಿಧನರಾಗಿದ್ದಾರೆ. ಮತ್ತೊಂದೆಡೆ, ಹಾಸನದಲ್ಲಿ ಜಿಲ್ಲೆಯ ಬೇಲೂರು ತಾಲ್ಲೂಕಿನ ಚಿಕ್ಕೋಲೆ ಗ್ರಾಮದಲ್ಲಿ ಜಯಣ್ಣ (49) ಮತ ಚಲಾಯಿಸಿ ಹೊರಗೆ ಬಂದ ಬಳಿಕ ಹೃದಯಾಘಾತದಿಂದ ಮತಗಟ್ಟೆ ಆವರಣದಲ್ಲೇ ಸಾವನ್ನಪ್ಪಿದ್ದಾರೆ.

## ರಾಣೇಬೆನ್ನೂರಿನಲ್ಲಿ ಅಭ್ಯರ್ಥಿಗಳ ಮತದಾನ







ರಾಣೇಬೆನ್ನೂರು, ಮೇ 10- ರಾಣೇಬೆನ್ನೂರು ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಕೋಳಿವಾಡ ಅವರು ಪತ್ನಿ ಪೂರ್ಣಿಮಾ ಜೊತೆ ಹುಟ್ಟೂರು ಗುಡಗೂರಿನಲ್ಲಿ, ಬಿಜೆಪಿ ಅಭ್ಯರ್ಥಿ ಅರುಣಕುಮಾರ ಪೂಜಾರ ಅವರು ಪತ್ನಿ ಮಂಗಳಗೌರಿ ಜೊತೆ ಹುಟ್ಟೂರು ಕುಮಾರಪಟ್ಟಣದಲ್ಲಿ ಮತದಾನ ಮಾಡಿದರು.

ಪಕ್ಷೇತರ ಅಭ್ಯರ್ಥಿ ಸಂತೋಷಕುಮಾರ ಪಾಟೀಲ, ಪತ್ನಿ ಚಂದನ ಜೊತೆ ಹುಟ್ಟೂರು ಕೋಟಿಹಾಳದಲ್ಲಿ, ಜೆಡಿಎಸ್ ಅಭ್ಯರ್ಥಿ ಮಂಜುನಾಥ ಗೌಡ ಶಿವಣ್ಣನವರ ಅವರು ಪತ್ನಿ ಶಶಿಕಲಾ ಜೊತೆ, ಪಕ್ಷೇತರ ಅಭ್ಯರ್ಥಿ ಡಾ.ಮೋಹನ ಹಂಡೆ ಪತ್ನಿ ಸುಲೋಚನಾ ಜೊತೆ, ಎನ್ ಸಿಪಿ ಅಭ್ಯರ್ಥಿ ಆರ್. ಶಂಕರ್ ಪತ್ನಿ ಧನಲಕ್ಷ್ಮಿ ಜೊತೆ ರಾಣೇಬೆನ್ನೂರಿನಲ್ಲಿ ಮತದಾನ ಮಾಡಿದರು.

## ಹರಪನಹಳ್ಳಿ : ವಿಕಲಚೇತನರನ್ನು ಮತಗಟ್ಟೆಗೆ ಕರೆ ತರಲು ವಿಶೇಷ ವಾಹನ ವ್ಯವಸ್ಥೆ





ಹರಪನಹಳ್ಳಿ, ಮೇ 10- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಪುರಸಭೆ ವ್ಯಾಪ್ತಿಯಲ್ಲಿರುವ 39 ಮತಗಟ್ಟೆಗಳಲ್ಲಿನ ವಿಕಲಚೇತನ ಮತದಾರರನ್ನು ಕರೆತರಲು ಮತ್ತು ಕಳುಹಿಸಲು ಪ್ರತಿ 4 ಮತಗಟ್ಟೆಗೆ ಒಂದರಂತೆ ಪ್ರಯಾಣಿಕರ ವಿಶೇಷ ವಾಹನ ವ್ಯವಸ್ಥೆಯನ್ನು ಪುರಸಭೆ ವತಿಯಿಂದ ಕಲ್ಪಿಸಲಾಗಿತ್ತು. ಆ ವಾಹನಗಳಿಗೆ ಪುರಸಭೆಯ ಯು.ಆರ್. ಡಬ್ಲ್ಯು ಹಾಗೂ ಕಛೇರಿಯ ಸಿಬ್ಬಂದಿಯನ್ನು ನೇಮಿಸಲಾಗಿತ್ತು.

ಸದರಿಯವರು ತಮ್ಮ ತಮ್ಮ ವ್ಯಾಪ್ತಿಯ ವಿಕಲಚೇತನರನ್ನು ಮತಗಟ್ಟೆಗೆ ಕರೆತಂದು ಹಾಗೂ ಮತ್ತೆ ವಾಪಾಸ್ ಮನೆಗೆ ಕಳುಹಿಸುವ ಕೆಲಸದಲ್ಲಿ ನಿರತರಾಗಿದ್ದುದು ಸಾಮಾನ್ಯವಾಗಿತ್ತು.

ಮತದಾನದಲ್ಲಿ ವಿಕಲಚೇತನರ ಭಾಗವಹಿಸುವಿಕೆಯ ಪ್ರತಿಫಲದಿಂದಾಗಿ ಮತದಾನ ಸುಗಮವಾಗಿ ನಡೆಯಿತು. ವಿಕಲಚೇತನರು ಶೇ.98.99 ರಷ್ಟು ಮತದಾನ ಮಾಡಿ ತಾವು ಸಾಮಾನ್ಯ ಮತದಾರರಿಗಿಂತ ಹೆಚ್ಚು ಎನ್ನುವುದನ್ನು ಚುನಾವಣೆ ಇಲಾಖೆಗೆ ಸಾಬೀತುಪಡಿಸಿದ್ದಾರೆ.

## ಬಿಎಲ್‌ಓ ಅಮಾನತ್ತು : ಡಿಸಿ

(1ನೇ ಪುಟದಿಂದ) ನೋಟಿಸ್ ನೀಡಲಾಗಿದ್ದು, ಇದಕ್ಕೆ ಸ್ವಗ್ರಾಮ ಜಮ್ಮಾಪುರ ಸಣ್ಣತಾಂಡಾದ ತಮ್ಮ ಬೀದಿಯಲ್ಲಿ ಏಪ್ರಿಲ್ 30 ರಂದು ಅಭ್ಯರ್ಥಿ ಚುನಾವಣಾ ಪ್ರಚಾರಕ್ಕೆ ಬಂದಾಗ ಭಾಗವಹಿಸಿದ್ದ ಗ್ರಾಮಸ್ಥರು ನನ್ನನ್ನು ಅಭ್ಯರ್ಥಿಗೆ ಶಿಕ್ಷಕರೆಂದು ಪರಿಚಯಿಸಿದಾಗ ಮೇಳಗಳ ಶಬ್ದಕ್ಕೆ ಕೇಳಿಸದಿದ್ದಾಗ ಕಿವಿ ಹತ್ತಿರ ಹೋಗಿ ಹೇಳಬೇಕಾಯಿತು ಎಂದು ಸಮಜಾಯಿಷಿ ನೀಡಿರುತ್ತಾರೆ.

ಅಭ್ಯರ್ಥಿ ಯೊಂದಿಗೆ ಸಂಭಾಷಣೆಯಲ್ಲಿ ತೊಡಗಿ ಸುಮಾರು ದೂರ ಕ್ರಮಿಸಿರುವುದು ಕಂಡು ಬಂದಿದ್ದರಿಂದ ಒಬ್ಬ ಸರ್ಕಾರಿ ನೌಕರನಾಗಿ ಚುನಾವಣಾ ಸಂದರ್ಭದಲ್ಲಿ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದು ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ ಮತ್ತು ಈ ನೌಕರರು ಬಿ.ಎಲ್.ಓ. ಆಗಿ ನೇಮಕವಾಗಿದ್ದು, ಇವರ ಸ್ಥಳಕ್ಕೆ ಆರ್. ಗಿರಿಜಾಬಾಯಿ ಅವರನ್ನು ನೇಮಕ ಮಾಡಲಾಗಿರುತ್ತದೆ. ನೌಕರರ ಮೇಲಿನ ಆರೋಪಕ್ಕೆ ಇಲಾಖಾ ವಿಚಾರಣೆ ಬಾಕಿ ಇರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತು ಮಾಡಿ ಆದೇಶಿಸಲಾಗಿದೆ.

## ಮತಗಟ್ಟೆಯಲ್ಲೇ ಸಹಜ ಹೆರಿಗೆ

(1ನೇ ಪುಟದಿಂದ) ಮಣಿಲಾ ಎನ್ನುವ ನವಮಾಸ ತುಂಬಿದ ಗರ್ಭಿಣಿ ಬೆಳಿಗ್ಗೆ 10 ಗಂಟೆಗೆ ಸರದಿ ಸಾಲಿನಲ್ಲಿ ನಿಂತು ಮತದಾನ ಮಾಡಿದ ನಂತರ ಹೆರಿಗೆ ನೋವು ಕಾಣಿಸಿಕೊಂಡಿದೆ. ಮತದಾನ ಕೇಂದ್ರದಲ್ಲಿಯೇ ಸಹಜ ಹೆರಿಗೆಯಾಗಿ ಗಂಡು ಮಗುವಿಗೆ ಜನ್ಮನೀಡಿದ್ದಾರೆ. ಕೂಡಲೇ ತಾಯಿ ಮತ್ತು ನವಜಾತ ಶಿಶುವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದ್ದು, ಇಬ್ಬರೂ ಆರೋಗ್ಯವಾಗಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಸೆಕ್ಟರ್ ಅಧಿಕಾರಿ ವೆಂಕಟೇಶ್ ರಾಮಚಂದ್ರಪ್ಪ, ಮತದಾನ ಕೇಂದ್ರದಲ್ಲಿಯೇ ಸಹಜ ಹೆರಿಗೆಯಾಗಿದೆ. ಚುನಾವಣಾ ಸಿಬ್ಬಂದಿ ಮತ್ತು ಮತದಾನಕ್ಕೆ ಬಂದಿದ್ದ ಮಹಿಳೆಯರು ಹೆರಿಗೆ ಮಾಡಿಸಲು ಸಹಕರಿಸಿದರು ಎಂದರು.

## ಮಲೇಬೆನ್ನೂರಿನ ರಾಜರಾಜೇಶ್ವರಿ ಶಾಲೆಗೆ ಶೇ.100 ಫಲಿತಾಂಶ









ಮಲೇಬೆನ್ನೂರು,ಮೇ 10- ಜಿಗಳಿ ರಸ್ತೆಯಲ್ಲಿರುವ ರಾಜ ರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆ ಗೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ದೊರಕಿದೆ. ಪರೀಕ್ಷೆಗೆ ಕುಳಿತ 24 ವಿದ್ಯಾರ್ಥಿಗಳಲ್ಲಿ ಆರು ಡಿಸ್ಟಿಂಕ್ಷನ್ ಹಾಗೂ 14 ಪ್ರಥಮ ಹಾಗೂ 4 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತೀರ್ಣರಾಗಿದ್ದಾರೆ.

600 ಅಂಕಗಳೊಂದಿಗೆ ಶೇ. 96 % ಫಲಿತಾಂಶ ಪಡೆದಿರುವ ಗೌರಿಕಾ ಜಿ. ಎಸ್. ಎಂಬ ವಿದ್ಯಾರ್ಥಿನಿ ಶಾಲೆಯ ಟಾಪರ್ ಆಗಿದ್ದಾಳೆ. ರಮ್ಯಾ ಎಸ್. (ಶೇ. 95.04), ವರ್ಷಾ ಚೌಧರಿ (ಶೇ .93), ಭುವನ ಓ.ಜಿ. (ಶೇ. 88.48), ಅನುಷಾ ಜಿ. ಎಂ. ಹಾಗೂ ಅಭಿರಾಮ್ ಶೇ. 85 ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಕನ್ನಡದಲ್ಲಿ ಗೌರಿಕಾ, ವರ್ಷಾ ಚೌಧರಿ ಹಾಗೂ ಅನುಷಾ 125 ಕ್ಕೆ 125, ಆಂಗ್ಲ ಭಾಷೆಯಲ್ಲಿ ರಮ್ಯಾ ಹಾಗೂ ಮಮತಾ ಚೌಧರಿ 100 ಕ್ಕೆ 100, ಹಿಂದಿ ವಿಷಯದಲ್ಲಿ ಗೌರಿಕಾ, ವರ್ಷಾ ಚೌಧರಿ, ಸಾನಿಯಾ ಭಾನು ಹಾಗೂ ರಮ್ಯಾ 100 ಕ್ಕೆ 100 ಅಂಕ ಪಡೆದಿದ್ದಾರೆ.

## ಕೋಡಿಯಾಲ-ಹೊಸಪೇಟೆ : ಪರಿಸರ ಸ್ನೇಹಿ, ಗ್ರಾಮೀಣ ಸೊಗಡಿನ ಮತಗಟ್ಟೆ



ರಾಣೇಬೆನ್ನೂರು, ಮೇ 10- ಶಾಸಕರ ಹುಟ್ಟೂರು ತಾಲ್ಲೂಕಿನ ಕೋಡಿಯಾಲ ಹೊಸಪೇಟೆಯಲ್ಲಿ ಮತದಾರರನ್ನು ವಿಶೇಷವಾಗಿ ಆಕರ್ಷಿಸಲು ಗ್ರಾ.ಪಂ. ಕಾರ್ಯಾಲಯದಲ್ಲಿರುವ ಮತಗಟ್ಟೆಯನ್ನು ಪರಿಸರ ಸ್ನೇಹಿ ಮತ್ತು ಗ್ರಾಮೀಣ ಸೊಗಡಿನಿಂದ ಕೂಡಿದ ಮತಗಟ್ಟೆಯನ್ನಾಗಿ ಶೃಂಗರಿಸಲಾಗಿತ್ತು.

ತೆಂಗಿನ ಗರಿಯಲ್ಲಿ ಹೆಣೆದ ತಟ್ಟೆಗಳು, ಮಾವಿನ ತೋರಣ, ಬಾಳೆಯ ಕಂಬ, ಹುಲ್ಲು ಹೊದಿಕೆಯ ಚಪ್ಪರ, ಕೃಷಿ ಸಲಕರಣೆಗಳ ಜೋಡಣೆ, ತೂಗಾಡುತ್ತಿದ್ದ ಹಣ್ಣು ಹಂಪಲುಗಳ ಗೊಂಚಲು ಜೊತೆಗೆ ಮತದಾನ ಮಾಡಿದವರು ಪೋಟೋ ತೆಗೆದುಕೊಳ್ಳಲು ವಿಶೇಷವಾದ ಮಂಟಪ ನಿರ್ಮಿಸಲಾಗಿತ್ತು. ಆದರೆ ಆ ಮತಗಟ್ಟೆಯಲ್ಲಿ ಮತದಾರರ ಕೊರತೆ ಕಂಡುಬಂದಿತು.

## ಮತದಾನದ ನಂತರ ಕಾಡಾನೆ ದಾಳಿಗೆ ಸಿಲುಕಿ ಸಾವು

ಚಾಮರಾಜನಗರ, ಮೇ 10 - ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ಮತದಾನ ಮಾಡಿ ಬರುತ್ತಿದ್ದ ವ್ಯಕ್ತಿ ಕಾಡಾನೆ ದಾಳಿಗೆ ತುತ್ತಾಗಿ ಸಾವನ್ನಪ್ಪಿದ ಘಟನೆ ನಡೆದಿದೆ. ತೋಕೆರೆ ಗ್ರಾಮದ ಪುಟ್ಟಸ್ವಾಮಿ (50) ಅವರು ಮತದಾನದ ನಂತರ ಕಾಲುದಾರಿಯಲ್ಲಿ ಬರುತ್ತಿದ್ದರು. ಆಗ ಕಾಡಾನೆ ದಾಳಿ ನಡೆಸಿದೆ. ಪುಟ್ಟಸ್ವಾಮಿ ಅವರು ತೋಕೆರೆ ಗ್ರಾಮದವರಾಗಿದ್ದು, ಮಾರ್ಟಳ್ಳಿಯಲ್ಲಿ ಕುಟುಂಬ ಸಮೇತ ನೆಲೆಸಿದ್ದರು. ಅವರು ಕೂಲಿ ಕೆಲಸ ಮಾಡುತ್ತಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀ ವಾಣಿ ಶಿವಣ್ಣ ಮತ್ತು ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.

ವಾಸದ ಮನೆ ಭೋಗ್ಯಕ್ಕೆ ಇದೆ
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಸೈಟ್ ಮಾರಾಟಕ್ಕೆ
ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗ, 30X38 ಉತ್ತರ-ಪಶ್ಚಿಮ ಕಾರ್ನರ್, 30X40 ಉತ್ತರ.
JH PATEL ಬಡಾವಣೆ 20X30, KHB 20X30 ಪೂರ್ವ ಸೈಟ್ ಸೇಲ್‌ಗೆ
ಕಿರಣ್ ಭೂಸನೂರ್ (ಏಜೆಂಟ್)
97315-63409

ಸೈಟುಗಳು ಮಾರಾಟಕ್ಕಿವೆ
ಶನೇಶ್ವರ ದೇವಸ್ಥಾನ ಹಿಂಭಾಗ ವಿಜನ್ ಇಂಟರ್ ನ್ಯಾಷನಲ್ ಸ್ಕೂಲ್ ಹತ್ತಿರ. 30x40, 30x40 East ಅಕ್ಕ-ಪಕ್ಕ. 60x40 East.
Rate : 2150
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ. ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಬಂಕ್ ಐಟಿಐ ಕಾಲೇಜ್ ಎದುರು, ಹದಡಿ ರಸ್ತೆ, ದಾವಣಗೆರೆ.

ಸೈಟುಗಳು ಮಾರಾಟಕ್ಕಿವೆ
ಓಲ್ಡ್ ಬನಶಂಕರಿ ಲೇಔಟ್‌ನಲ್ಲಿ, ಹೊಸ ಬನಶಂಕರಿ 40x43 East, 30x50 West, 30x40 West, 80x43 East, 80x70, West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

WANTED
Boys required for Billing work at
Food Mart Super market
Quali : B.Com
M : 98864 63531

JOBS
(Banking Products)
1) Telecalling - 2 (For Ladies only)
2) Marketing Exuecutive - 2 (For Men)
Qualification : SSLC/PUC & Above. Contact :
76248 68848

ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ
ವಿದ್ಯಾರ್ಹತೆ : B.A, B.Ed, B.Sc, B.Ed, B.P.Ed, Degree ಆದ ಅಭ್ಯರ್ಥಿಗಳು 7 ದಿನದ ಒಳಗಾಗಿ ಅರ್ಜಿ ಸಲ್ಲಿಸಿರಿ. ಕಾರ್ಯದರ್ಶಿ
ಶ್ರೀ ವಿದ್ಯಾಜ್ಯೋತಿ ಪ್ರೌಢಶಾಲೆ,
ವೀರಭದ್ರಪ್ಪ ನಗರ, ಬೇತೂರು ರಸ್ತೆ, ದಾವಣಗೆರೆ-01. ಅನುದಾನಕ್ಕೊಳಪಡುವ ಶಾಲೆ.
91489 32083

ಸಣ್ಣ, ಸಣ್ಣ ಸೈಟುಗಳು ಮಾರಾಟಕ್ಕಿವೆ
15x45 South, ವಿವೇಕಾನಂದ ಬಡಾವಣೆಯಲ್ಲಿ, 20x30 ಕಾರ್ನರ್ ವಾಜಪೇಯಿ ಲೇಔಟ್‌ನಲ್ಲಿ, 20x50 West, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ
ಹರಿಹರ-ದಾವಣಗೆರೆ
ಪಿ.ಬಿ ರೋಡ್ Facing.
Contact : Buyers Only.
Sharma :
74112 50447

EC / ಇಸಿ,
E-swathu,
Khatha Change
Building Licence
& Other Property Documents
96118-66449

HOUSES FOR RENT
1 BHK, 2BHK, 3BHK, 4BHK, Independent, Duplex, Car parking, Tap water, Bore water, Solar, LIC Colony, SS Layout, JH patel layout, Anjaneya badavane, Banashankari Layout.
77955 06795
Dakshith Iynahalli

WANTED
Banking Sector Tele Caller
(Female Only)
Qualification : Any Degree
90715 55081
Interview time : 11AM

HANDWRITING & CALLIGRAPHY
CLASSES FOR STUDENTS
1st STANDARD to 2nd PUC
MANIPAL INSTITUTE OF COMPUTER EDUCATION
MCC B BLOCK, DAVANAGERE
90364 27272, 72049 85552

ABACUS & VEDIC MATHS
CLASSES FOR STUDENTS
1st Std to 10th Std
MANIPAL INSTITUTE OF COMPUTER EDUCATION
MCC B BLOCK, DAVANAGERE
90364 27272, 72049 85552


ವಿಕಾಸ್ ಸ್ಪೋಕನ್ ಇಂಗ್ಲಿಷ್ & ಕಂಪ್ಯೂಟರ್ ಕ್ಲಾಸಸ್
33 ದಿನಗಳಲ್ಲಿ ಕಲಿಯಿರಿ.
ಕಲಿಯದಿದ್ದರೆ ಹಣ ವಾಪಸ್
Contact :
93802 29199
ದಾವಣಗೆರೆ, ಹರಿಹರ

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
87490 98879

ಬೇಕಾಗಿದ್ದಾರೆ
ಬ್ರಾಂಡೆಂಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
98867 57688

Home Tution
(100% Result)
6 ರಿಂದ 10ನೇ ತರಗತಿಯವರೆಗೆ ನಿಮ್ಮ ಮನೆಗೇ ಬಂದು ಟ್ಯೂಷನ್ ಮಾಡಲಾಗುವುದು.
JEE, NEET, Basic Coaching with material. subject : Maths, Science (CBSE, STATE, ICSE)
90192 68891

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ಪಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ: 2 & 3 ರಂದು
ಬಸವರಾಜ ಲಾಡ್ಜ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

ಶಿಕ್ಷಕರು ಬೇಕಾಗಿದ್ದಾರೆ
ವಿಂಪನ ಸೆಂಟ್ರಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ಸಾಸ್ವೆಹಳ್ಳಿ
ನಮ್ಮ ಶಾಲೆಯಲ್ಲಿ ಇಂಗ್ಲಿಷ್, ಗಣಿತ, ವಿಜ್ಞಾನ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲು ಬಿ.ಇಡಿ., ವಿದ್ಯಾರ್ಹತೆಯುಳ್ಳ ಶಿಕ್ಷಕರು ತಕ್ಷಣ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಫೋ. : 77608 39839

ಉಚಿತ ಬೇಸಿಕ್ ಕಂಪ್ಯೂಟರ್ ಕೋರ್ಸ್‌ಗಳು
ವಿದ್ಯಾರ್ಥಿಗಳಿಗೆ (ಯಾವುದೇ ವಯಸ್ಸು/ವರ್ಗ) ಸರ್ಕಾರಿ ನೌಕರರು, ಟೀಚರ್‌ಗಳು, ಕೆಲಸ ಮಾಡುವ ಉದ್ಯೋಗಿಗಳು, ಗೃಹಿಣಿಯರು, ಎಂಜಿನಿಯರ್‌ಗಳು, ವೈದ್ಯರು, ಲೆಕ್ಕ ಪರಿಶೋಧಕರು, ಕಾರ್ಮಿಕರು, ಹಿರಿಯ ನಾಗರಿಕರು, ಖಾಸಗಿ ಉದ್ಯೋಗಿಗಳು, ಬ್ಯಾಂಕ್ ಸಿಬ್ಬಂದಿ ಮತ್ತು ಎಲ್ಲರಿಗೂ
ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಶನ್
ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ
90364 27272, 72049 85552

FREE BASIC COMPUTER COURSES
FOR : Students (Any age/Class) Govt Employees, Teachers, Working Employees, House Wives, Engineers, Doctors, Auditors, Labourers, Senior citizens, Private Employees, Bank Staff & for All
MANIPAL INSTITUTE OF COMPUTER EDUCATION
MCC B Block, Davanagere.
90364 27272 / 72049 85552

HOUSE FOR LEASE
Independent house, 3 BHK
5th main, 5th cross,
St. Pauls Convent Road,
PJ extension,
Davangere.
88616 89590

ವಾಣಿಜ್ಯ ಕಟ್ಟಡ ಬಾಡಿಗೆಗೆ
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
SMS Convent and High School
ರಾಜೀವ್‌ಗಾಂಧಿ ಬಡಾವಣೆ, ದಾವಣಗೆರೆ.
Nursery teacher - PUC/D.Ed -03
Science - CBZ - 02
Mathematics - PCM - 02
ಅರ್ಹ್ಯಯಾದ ಅಭ್ಯರ್ಥಿಗಳಿಗೆ ಆಕರ್ಷಕ ವೇತನ ನೀಡಲಾಗುವುದು.
98447 35946, 96631 95531

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು. ಸಂಬಳ 11,000 ಊಟ, ರೂಂ ಉಚಿತ.
97400 98064
97400 98047

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ವಿದ್ಯಾರ್ಥಿಗಳಿಗೆ ಉಚಿತ ಯೂನಿಫಾರ್ಮ್ ನೀಡಲಾಗುವುದು
ಶ್ರೀ ಗಂಗೋತ್ರಿ ಕಮ್ಯೂನಿಟಿ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013

FOR RENT
First Floor MCC
'B' Block Boys
Hostel Road,
82177 72482

Tuition for Supplementary exam
SSLC & PUC
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್, ದಾವಣಗೆರೆ
8861445913 8553278258

WANTED
Lady receptionist knowing good English, English typing skills & computer knowledge at
SHEETAL DIAGNOSTIC CENTRE
P.J.Extension, 7th Cross, Near Byadgi Shetru School, Davanagere.
Contact with resume.
94485 90794, 96263 44451

ಅಧಿಕೃತ ಚೀಟಿ ಸಂಸ್ಥೆ
ರೂ. 100000/- ಚೀಟಿ
ಪ್ರಾರಂಭ ಕಂತುಗಳು, 2000/- ರಿಂದ 1400/- ರೂ ವರೆಗೆ.
ಸ್ಕಂದ ಚಿಟ್ ಫಂಡ್ಸ್ (ರಿ)
ಸಂಪರ್ಕಿಸಿ :
78997 75159

ಅಕೌಂಟೆಂಟ್ ಬೇಕಾಗಿದ್ದಾರೆ
Experienced
ಸಂಪರ್ಕಿಸಿ. ಸಂಕೇಶ್ವರ ಇಂಡಸ್ಟ್ರೀಸ್
ಕರೂರ್ ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
ಅರ್ಹತೆ :Tally, Exel, Drive
97387 08495, 99018 69371

# ಕಡ್ಡಾಯ ಮತದಾನ ಜಾರಿಗೆ ತರಲು ತರಳಬಾಳು ಜಗದ್ಗುರುಗಳ ಕರೆ



ಸಿರಿಗೆರೆ, ಮೇ 10- ಮತದಾನ ಮಾಡದವರಿಗೆ ಬಿಪಿಎಲ್ ಕಾರ್ಡ್, ಪಿಂಚಣಿ, ಕಿಸನ್ ಸಮ್ಮಾನ್ ಇಂತಹ ಮೂಲಭೂತ ನಾಗರಿಕ ಸೌಕರ್ಯಗಳನ್ನು ರದ್ದು ಮಾಡುವಂತೆ ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗ ವಿಶೇಷ ಕಾಯಿದೆ ಜಾರಿಗೆ ತರುವ ಅವಶ್ಯಕತೆ ಇದೆ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಸಿರಿಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ-71 ರಲ್ಲಿ ಮತದಾನ ಮಾತನಾಡಿ, ರಾಜ್ಯದ ಜನರಿಗೆ ಮತದಾನ ದ ಬಗ್ಗೆ ಜಾಗೃತಿ ಹಾಗೂ ಪ್ರಜಾಪ್ರಭುತ್ವ ಬಗ್ಗೆ ಕಾಳಜಿ ಇರುವುದರಿಂದಲೇ ಮತದಾನ ಉತ್ತಮವಾಗಿ ನಡೆಯುತ್ತಿದೆ.

ಸಿರಿಗೆರೆಯಲ್ಲಿ ಪ್ರಜ್ಞಾವಂತ ನಾಗರಿಕರು ಶೇ. 100ರಷ್ಟು ಮತದಾನ ಮಾಡುವುದರ ಮೂಲಕ ಮಾದರಿ ಗ್ರಾಮವಾಗಿಸಬೇಕು ಎಂದರು. ಮತದಾನ ಮಾಡದ ನಾಗರಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಇದಕ್ಕೆ ಒಂದು ತಂತ್ರಜ್ಞಾನ ಹಾಗೂ ನಿಯಮ ಜಾರಿಯಾಗಬೇಕು ಎಂದರು.

224 ಕ್ಷೇತ್ರಗಳಲ್ಲಿ ಅಧಿಕ ಕ್ಷೇತ್ರಗಳನ್ನು ಗೆದ್ದ ಪಕ್ಷ ಸರ್ಕಾರ ರಚಿಸಬೇಕು. ಈ ರೀತಿಯ ಕಾನೂನು ಹಾಗೂ ನಿಯಮಗಳು ಬದಲಾಗಬೇಕು. ಇಲ್ಲವಾದರೆ ಬಹುಮತಕ್ಕೋಸ್ಕರ ಬೇರೆ ಪಕ್ಷಗಳಿಂದ ಶಾಸಕರನ್ನು ರೆಸಾರ್ಟ್ ರಾಜಕೀಯ ಹಾಗೂ ಇತರೆ ಆಮಿಷಗಳನ್ನು ಒಡ್ಡಿ ಕರೆತರುವ ರಾಜಕೀಯ ಬದಲಾದರೆ ಮಾತ್ರ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ಬದಲಾವಣೆ ತರಲು ಸಾಧ್ಯ.

ಈ ಸಂದರ್ಭದಲ್ಲಿ ಭರಮಸಾಗರ ಪಿಎಸ್ಐ ಎಲ್. ರವಿನಾಯ್ಕ್, ಬಿಎಲ್‌ಓಗಳು ಹಾಗೂ ಮತದಾರರು ಇದ್ದರು. ಮತಗಟ್ಟೆಯಲ್ಲಿ ಮತದಾನ ಮಾಡಲು ಬಂದ 87 ವರ್ಷದ ವೃದ್ಧೆ ಕಂಡುಬಂದರು.

## ವಿಶ್ವಸಂಸ್ಥೆಯ ಕಾರ್ಯಾಗಾರಕ್ಕೆ ನಗರ ಮೂಲದ ಕಂಪನಿ ನೇತೃತ್ವ



ದಾವಣಗೆರೆ, ಮೇ 10- ಹಣಕಾಸು ಸೇವೆಗಳಲ್ಲಿ ಡಿಜಿಟಲ್ ಪರಿವರ್ತನೆ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಷಯ ಕುರಿತು ದಾವಣಗೆರೆ ಮೂಲದ ಬೆಂಗಳೂರಿನ ಐಡಾ ಲವ್‌ಲೇಸ್ ಸಾಫ್ಟ್‌ವೇರ್ ಕಂಪನಿ ಅಡಿಯಲ್ಲಿ ಜಿನಿವಾದಲ್ಲಿರುವ ವಿಶ್ವಸಂಸ್ಥೆಯಲ್ಲಿ ವಿಷಯಾಧಾರಿತ ಕಾರ್ಯಾಗಾರ ಹಮ್ಮಿಕ್ಕೊಳ್ಳಲಾಗಿತ್ತು.

ವರ್ಚ್ಯುವಲ್ ಮೂಲಕ ನಡೆದ ಈ ಕಾರ್ಯಾಗಾರದಲ್ಲಿ ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಜಂಟಿ ನಿರ್ದೇಶಕರಾದ ಸ್ವಪ್ನಾಲಿ ನಾಯಕ್, ಐಡಾ ಲವ್‌ಲೇಸ್ ಸಾಫ್ಟ್‌ವೇರ್ ಕಂಪನಿ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ರಾಕೇಶ್, ನಗರದ ಜೈನ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ಬಿ.ಗಣೇಶ್, ಯುರೋಪ್‌ನ ಲಟ್ವಿಯನ್ ಅಕಾಡೆಮಿ ನಿರ್ದೇಶಕಿ ಡಾ.ನಿನಾ, ಬೆಂಗಳೂರಿನ ಜೈನ್ ವಿದ್ಯಾಲಯದ ಮಾಧ್ಯಮ ಮತ್ತು ಸಂವಹದ ವಿಭಾಗದ ಶುಭಾ ಶ್ರೀಕಾಂತ್, ಜರ್ಮನಿಯ ಶಿರಾ ದಾಮಿಯಾ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಇತ್ತೀಚೆಗೆ ವಾಷಿಂಗ್ಟನ್‌ನಲ್ಲಿ ನಡೆದ ವಿಶ್ವ ಬ್ಯಾಂಕ್ ವಾರ್ಷಿಕ ಸಭೆಗಳಲ್ಲಿ ಭಾಗವಹಿಸಿದ್ದ ನಗರದ ಡಾ.ಎಲ್.ರಾಕೇಶ್, ಕಡಿಮೆ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಸೈಬರ್ ಸೆಕ್ಯುರಿಟಿ ಕುರಿತು ಮಹಿಳೆಯರಿಗೆ ಮಾರ್ಗದರ್ಶನ ನೀಡಿದ್ದರು.

## ನಗರದಲ್ಲಿ ಇಂದು ನ್ಯಾಯಾಧೀಶರಿಗೆ ಬೀಳ್ಕೊಡುಗೆ ಸಮಾರಂಭ

ಗದಗ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುವ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಜೆಎಂ ಆದ ಪ್ರೀತಿ ಸದ್ಗುರು ಸದರಜೋಷಿ ಹಾಗೂ ದೇವನಹಳ್ಳಿಯ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುವ ದಾವಣಗೆರೆ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ ನಾಯಕ ಅವರಿಗೆ ಹಾಗೂ ವಯೋ ನಿವೃತ್ತಿಗೊಂಡಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಕೆ.ಕೆಂಚಪ್ಪ ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಇಂದು ಬೆಳಿಗ್ಗೆ 10.30ಕ್ಕೆ ದಾವಣಗೆರೆಯ ವಕೀಲರ ಸಂಘದ ಸಾಂಸ್ಕೃತಿಕ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್ ಕುಮಾರ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಎಸ್.ಜಿ.ಸಲಗೆರೆ, 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಮಲ್ಲಿಕಾರ್ಜುನ್, 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾಝೀಯಾ ಕೌಸರ್ ಆಗಮಿಸಲಿದ್ದು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

## ವಿದ್ಯಾನಿಕೇತನ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ. 100 ಫಲಿತಾಂಶ

ದಾವಣಗೆರೆ, ಮೇ 10 - ನಗರದ ಜಯನಗರ 'ಎ' ಬ್ಲಾಕ್‌ನಲ್ಲಿರುವ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡ 100ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಅಮಿತ್ ಎಸ್.ಎ. ಈ ವಿದ್ಯಾರ್ಥಿ 514 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. 6 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಆರ್. ಮೀನಾಕ್ಷಿ, ಸಂಸ್ಥಾಪಕ ರುದ್ರಮುನಿ, ಕಾರ್ಯದರ್ಶಿ ಮಂಜುನಾಥ ಆರ್. ಹೆಗಡೆ, ಆಡಳಿತಾಧಿಕಾರಿ ಕೆ.ಬಿ.ಆನಂದ್, ಮುಖ್ಯೋಪಾಧ್ಯಾಯ ಬಿ.ಸಿ. ರೇಣುಕಾರಾಧ್ಯ ಅಭಿನಂದಿಸಿರುತ್ತಾರೆ.

## ಬಿಜೆಎಂ, ಜಿಎನ್‌ಬಿ ಆಂಗ್ಲ ಮಾಧ್ಯಮ ಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100

ದಾವಣಗೆರೆ, ಮೇ 10 - ನಗರದ ಕೊಂಡಜ್ಜಿ ರಸ್ತೆಯಲ್ಲಿರುವ ಬಿ.ಜಿ.ಎಂ. ಮತ್ತು ಜಿ.ಎನ್.ಬಿ. ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಎಸ್. ಮಂಜುನಾಥ ಅಗಡಿ ಅಭಿನಂದಿಸಿದ್ದಾರೆ.

## ಎಸ್ಸೆಸ್ಸೆಲ್ಸಿಯಲ್ಲಿ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 10 - ನಗರದ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಗೆ 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶ ಲಭಿಸಿದೆ.

ಶಾಲೆಯ ವಿದ್ಯಾರ್ಥಿನಿ ಸುಹಾಸಿನಿ 598 ಅಂಕಗಳನ್ನು ಗಳಿಸಿರುತ್ತಾರೆ. 7 ಡಿಸ್ಟಿಂಕ್ಷನ್, 19 ಪ್ರಥಮ ದರ್ಜೆ, 2 ದ್ವಿತೀಯ ದರ್ಜೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ಸಿಬ್ಬಂದಿ ವರ್ಗ, ಲಯನ್ಸ್ ಟ್ರಸ್ಟ್, ಲಯನ್ಸ್ ಕ್ಲಬ್ ಅಧ್ಯಕ್ಷರು ಮತ್ತು ಸದಸ್ಯರು ಅಭಿನಂದಿಸಿದ್ದಾರೆ.

## ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ, ಅತಂತ್ರ ಸಾಧ್ಯತೆ ಚುನಾವಣೋತ್ತರ ಸಮೀಕ್ಷೆಗಳ ವರದಿ

ನವದೆಹಲಿ, ಮೇ 10 – ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅತಿ ಹೆಚ್ಚು ಸ್ಥಾನಗಳು ದೊರಕಲಿವೆಯಾದರೂ, ಅತಂತ್ರ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ತಿಳಿಸಿವೆ.

ಇಂಡಿಯಾ - ಟುಡೇ ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯ ಪ್ರಕಾರ, 224 ಸದಸ್ಯರ ವಿಧಾನಸಭೆಯಲ್ಲಿ ಕಾಂಗ್ರೆಸ್ 122 ರಿಂದ 140 ಸ್ಥಾನ ಪಡೆಯಲಿದೆ. ಬಿಜೆಪಿ 62-80 ಹಾಗೂ ಜೆಡಿಎಸ್ 20-25 ಸೀಟು ಪಡೆಯಲಿದೆ. ನ್ಯೂಸ್ 24 – ಟುಡೇಯ್ಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ ಕಾಂಗ್ರೆಸ್ 120, ಬಿಜೆಪಿ 92 ಹಾಗೂ ಜೆಡಿಎಸ್ 12 ಸ್ಥಾನ ಪಡೆಯಲಿವೆ.

ಎಬಿಪಿ ನ್ಯೂಸ್ - ಸಿ ವೋಟರ್ ಸಮೀಕ್ಷೆ ಪ್ರಕಾರ, ಕಾಂಗ್ರೆಸ್ 100-112, ಬಿಜೆಪಿ 83-95 ಹಾಗೂ ಜೆಡಿಎಸ್ 21-29 ಸ್ಥಾನ ಪಡೆಯಲಿವೆ. ರಿಪಬ್ಲಿಕ್ ಟಿವಿ-ಪಿ ಮಾರ್ಕ್ ಪ್ರಕಾರ ಕಾಂಗ್ರೆಸ್ 94-108, ಬಿಜೆಪಿ 85-100 ಹಾಗೂ ಜೆಡಿಎಸ್ 24-32 ಸ್ಥಾನ ಪಡೆಯಲಿವೆ. ಇಂಡಿಯಾ ಟಿವಿ - ಸಿಎನ್‌ಎಕ್ಸ್ ಪ್ರಕಾರ ಕಾಂಗ್ರೆಸ್ 110-120, ಬಿಜೆಪಿ 80-90 ಹಾಗೂ ಜೆಡಿಎಸ್ 20-24 ಸ್ಥಾನ ಪಡೆಯಲಿವೆ.

ಟಿವಿ9- ಭಾರತ್ ವರ್ಷ್ - ಪೋಲ್‌ಸ್ಟ್ರ್ಯಾಟ್ ಪ್ರಕಾರ ಕಾಂಗ್ರೆಸ್ 99-109, ಬಿಜೆಪಿ 88-98 ಹಾಗೂ ಜೆಡಿಎಸ್ 21-26 ಸ್ಥಾನ ಪಡೆಯಲಿವೆ. ನ್ಯೂಸ್ - ಮೆಟ್ರೀಜೈ ಏಜೆನ್ಸಿ ಸಮೀಕ್ಷೆಯ ಪ್ರಕಾರ ಕಾಂಗ್ರೆಸ್ 103-118, ಬಿಜೆಪಿ 79-94 ಹಾಗೂ ಜೆಡಿಎಸ್ 25-33 ಸ್ಥಾನ ಪಡೆಯಲಿವೆ.



### ಒಂದೇ ಕುಟುಂಬದ 28 ಜನರಿಂದ ಮತದಾನ

ಮಲೇಬೆನ್ನೂರು, ಮೇ 10- ಕುಂಬಳೂರು ಗ್ರಾಮದ ಹಿರಿಯ ಮುಖಂಡ ಮಾಗಾನಹಳ್ಳಿ ಹಾಲಪ್ಪ ಅವರ ಮನೆಯ 28 ಜನ ಮತದಾರರು ಒಟ್ಟಿಗೆ ಹೋಗಿ ಮತದಾನ ಮಾಡುವ ಮೂಲಕ ಗಮನ ಸೆಳೆದರು.

## ಎಲೆಬೇತೂರಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಗೆ ಶೇ. 96.22 ಫಲಿತಾಂಶ

ದಾವಣಗೆರೆ, ಮೇ 9 - ಎಲೆಬೇತೂರಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ 2022-23ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 96.22ರಷ್ಟು ಫಲಿತಾಂಶ ಪಡೆದಿದೆ. ಶೈಕ್ಷಣಿಕ ವರ್ಷದಲ್ಲಿ 53 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಉನ್ನತ ಶ್ರೇಣಿ-02, ಪ್ರಥಮ ಶ್ರೇಣಿ-26, ದ್ವಿತೀಯ ಶ್ರೇಣಿ-16 ಹಾಗೂ ತೃತೀಯ ಶ್ರೇಣಿ-07, ಒಟ್ಟು 51 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಸಂಗೀತ ಡಿ. (533), ಸುಮ.ಜೆ. (532) ಮತ್ತು ವೀರೇಶ್ ಆರ್. (526) ಇವರುಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿದ್ದಾರೆ.

## ಗ್ರಾಸಿಂ ಸಿರಿಗನ್ನಡ ವಿದ್ಯಾಲಯದ ವಿದ್ಯಾರ್ಥಿನಿಯರು ಮೇಲುಗೈ





ರಾಣೇಬೆನ್ನೂರು, ಮೇ 10 - ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಣೇಬೆನ್ನೂರು ತಾಲ್ಲೂಕು ಕವಲೆತ್ತು ಗ್ರಾಮದ ಗ್ರಾಸಿಂ ಸಿರಿಗನ್ನಡ ವಿದ್ಯಾಲಯದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಾದ ಸ್ನೇಹ ಎ.ಓ ಶೇ.96.32, ಪದ್ಮಾ ಜೆ. ಸಿ ಶೇ.94.72 ಹಾಗೂ ಇಂಚರ ಎಂ.ಬಿ ಶೇ. 94.56 ಅಂಕ ಪಡೆದಿದ್ದಾರೆ.



### ಮಲೇಬೆನ್ನೂರು : ಏಕಕಾಲದಲ್ಲಿ ಮತದಾನ

ಮಲೇಬೆನ್ನೂರು, ಮೇ 10- ಪಟ್ಟಣದ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ರಸ್ತೆಯ (2ನೇ ವಾರ್ಡ್) ನಿವಾಸಿಗಳು ಒಟ್ಟಿಗೆ ಮತಗಟ್ಟೆಗೆ ತೆರಳಿ ಮತದಾನ ಮಾಡಿ ಗಮನ ಸೆಳೆದರು.

## ಕಾಂಗ್ರೆಸ್ ಪಕ್ಷದ ವಿವಿಧ ವಿಭಾಗಗಳಿಗೆ ನೂತನ ಪದಾಧಿಕಾರಿಗಳ ನೇಮಕ






ದಾವಣಗೆರೆ, ಮೇ 10- ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದವ ರನ್ನು ಕಾಂಗ್ರೆಸ್ ಪಕ್ಷದ ವಿವಿಧ ಹುದ್ದೆಗಳಿಗೆ ನೇಮಿಸಲಾಗಿದೆ. ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ ಅಕ್ಕಿ ರಾಮಚಂದ್ರ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಕರೂರು ಗಣೇಶ್, ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ (ಸಾಮಾಜಿಕ ಜಾಲತಾಣ) ಸುರೇಶ್ ಕೋಗುಂಡೆ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಸಿದ್ದಪ್ಪ ಅಡಾಣಿ, ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ ಶಶಿಧರ್ ಹೆಚ್.ವೈ. ಹಾಗೂ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ ಕೆ. ಕಾಳಾಚಾರಿ ನೇಮಕಗೊಂಡಿದ್ದಾರೆ.

## ಮತ ಚಲಾಯಿಸಿದ ಅರುಣ್‌ಕುಮಾರ್



ದಾವಣ ಗೆರೆ, ಮೇ 10- ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್ ಕುಮಾರ್ ಜಯನಗರ ಸಿ ಬ್ಲಾಕ್‌ನಲ್ಲಿರುವ ಮೌಂಟ್ ಎವರೆಸ್ಟ್ ಶಾಲೆಯಲ್ಲಿ ಮತದಾನ ಮಾಡಿದರು. ಜಾತ್ಯತೀತ, ಧರ್ಮ ನಿರಪೇಕ್ಷ, ಸಂವಿಧಾನ ಆಶಯಗಳ ಜನತಂತ್ರ ದ ಆರೋಗ್ಯದ ದೃಷ್ಟಿಯಿಂದ ಸ್ವತಂತ್ರ ಭಾರತದ ಪ್ರಜಾಪ್ರಭು ತ್ವದ ಸುರಕ್ಷತೆಗೆ ಪ್ರತಿಯೊಬ್ಬರೂ ಮತದಾನ ಮಾಡಬೇಕು ಎಂದು ಅವರು ಹೇಳಿದರು.

## ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ ಮತದಾನ




ದಾವಣಗೆರೆ, ಮೇ 10- ವಿದ್ಯಾನಗರದಲ್ಲಿರುವ ಮಾರುತಿ ಪ್ರೌಢಶಾಲೆಯ ಮತದಾನ ಕೇಂದ್ರದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಪತ್ನಿಯ ಜೊತೆಯಲ್ಲಿ ತೆರಳಿ ಮತದಾನ ಮಾಡಿದರು.

## ಮತದಾರರ ಪಟ್ಟಿಯಲ್ಲಿ ಹೆಸರು ನಾಪತ್ತೆ : ವರ್ಷ ನಿರಾಸೆ

ದಾವಣಗೆರೆ,ಮೇ 10- ಮತದಾರರ ಪಟ್ಟಿಯಲ್ಲಿ ಸಾಕಷ್ಟು ಹೆಸರುಗಳು ನಾಪತ್ತೆಯಾಗಿವೆ ಎಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ವ್ಯವಸ್ಥಾಪಕ ಕೆ.ಎಸ್. ಬೀರಪ್ಪ ದೂರಿದ್ದಾರೆ. ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಮತದಾನ ಮಾಡಲೆಂದು ತಮ್ಮ ಪುತ್ರಿ ವರ್ಷ ಮತಗಟ್ಟೆಗೆ ಹೋದ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಆಕೆಯ ಹೆಸರು ಇರಲಿಲ್ಲ ಎಂದು ಅವರು ತಿಳಿಸಿದ್ದಾರೆ.

ಈ ಹಿಂದಿನ ಚುನಾವಣೆ ಸಮಯದಲ್ಲಿ ಸೇರ್ಪಡೆಯಾಗಿದ್ದು, ಈಗ ಯಾವುದೇ ಕಾರಣವಿಲ್ಲದೆ ಹೆಸರು ಮತದಾರ ಪಟ್ಟಿಯಿಂದ ನಾಪತ್ತೆಯಾಗಿದೆ. ಮತದಾನ ಮಾಡುವ ಉದ್ದೇಶದಿಂದಲೇ ವರ್ಷ ಮೈಸೂರಿನಿಂದ ಬಂದಿದ್ದಳು. ಆದರೆ, ಮತದಾನ ಮಾಡಲು ಅವಕಾಶ ಸಿಗದ ಕಾರಣ ಬಹಳ ನಿರಾಸೆಗೊಂಡಿದ್ದಾಳೆ ಎಂದು ಬೀರಪ್ಪ ಹೇಳಿದ್ದಾರೆ.

## ಸಲಿಂಗ ಸಂಬಂಧವರು ದತ್ತು ಪ್ರಕ್ರಿಯೆಯಿಂದ ಹೊರಗಿಲ್ಲ



ನವದೆಹಲಿ,ಮೇ10 – ಸಲಿಂಗಸಂಬಂಧದಲ್ಲಿರುವವರನ್ನು ದತ್ತು ಪ್ರಕ್ರಿಯೆಯಿಂದ ಹೊರಗಿರಿಸಿಲ್ಲ. ಮದುವೆಯ ಸ್ಥಿತಿಗತಿ ಏನೇ ಆಗಿದ್ದರೂ ದತ್ತಿಗೆ ಸಂಬಂಧಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ ಪೀಠ ಈ ನಿಲುವು ತಳೆದಿದೆ. ದತ್ತು ಪಡೆಯಲು ಬಯಸುವವರು ದ್ವಿಲಿಂಗ ಸಂಬಂಧದವರಾಗಿರಬೇಕು ಎಂದು ಕಾಯ್ದೆಯಲ್ಲಿ ತಿಳಿಸಿಲ್ಲ ಎಂದು ಪೀಠ ಹೇಳಿದೆ.

## ಎಸ್ಸೆಸ್ಸೆಲ್ಸಿ : ಅತ್ತಿಗೆರೆ ಕೇಸರಿ ವಿದ್ಯಾಸಂಸ್ಥೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 10- ತಾಲ್ಲೂಕಿನ ಅತ್ತಿಗೆರೆ ಗ್ರಾಮದ ಶ್ರೀ ಕೇಸರಿ ವಿದ್ಯಾಸಂಸ್ಥೆಯ ಶ್ರೀ ಮಹದೇವ ಕೇಸರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ 2022-23 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾದ 93 ವಿದ್ಯಾರ್ಥಿಗಳ ಪೈಕಿ 49 ವಿದ್ಯಾರ್ಥಿಗಳು ವಿಶಿಷ್ಟ ದರ್ಜೆಯಲ್ಲಿ (ಶೇ. 85 ಕ್ಕಿಂತ ಹೆಚ್ಚು), 43 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಎಂ. ಆರ್. ಭೂಮಿಕ 619 ಅಂಕಗಳನ್ನು (ಶೇ. 99.04) ಪಡೆದಿದ್ದಾರೆ. ವಿಷಯವಾರು 100 ಅಂಕ ಗಳಿಸಿದ ವಿದ್ಯಾರ್ಥಿಗಳು: ಕನ್ನಡದಲ್ಲಿ 6, ಇಂಗ್ಲಿಷ್‌ನಲ್ಲಿ 1, ಹಿಂದಿಯಲ್ಲಿ 8 ಹಾಗೂ ಸಮಾಜ ವಿಜ್ಞಾನದಲ್ಲಿ ಓರ್ವ ವಿದ್ಯಾರ್ಥಿ ಉತ್ತೀರ್ಣರಾಗಿದ್ದಾರೆ.



### ಎಸ್ಸೆಸ್ಸೆಂ ಕುಟುಂಬ ಸಮೇತ ಮತದಾನ

ದಾವಣಗೆರೆ,ಮೇ 10- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತಮ್ಮ ಕುಟುಂಬ ಸಮೇತ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಐಎಂಎ ಹಾಲ್‌ನಲ್ಲಿನ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಎಸ್ಸೆಸ್ಸೆಂ ಅವರು ಪತ್ನಿ ಶ್ರೀಮತಿ ಪ್ರಭಾ, ಪುತ್ರ ಸಮರ್ಥ್, ಕು. ಶ್ರೇಷ್ಠ ಅವರುಗಳೊಂದಿಗೆ ಮತದಾನ ಮಾಡಿ ಸಂಭ್ರಮಿಸಿದರು.

## ಅಮೆರಿಕಾದಿಂದ ಬಂದರೂ ಮತದಾನ ಭಾಗ್ಯ ಸಿಗಲಿಲ್ಲ



ದಾವಣಗೆರೆ, ಮೇ 10- ಮತದಾನ ಮಾಡಲೆಂದೇ ಅಮೆರಿಕಾದಿಂದ ಬಂದಿದ್ದ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ನಿವಾಸಿ ರಾಘವೇಂದ್ರ ಕಮಲಾಕರ ಶೇಟ್ ಅವರು ಮತದಾರ ಪಟ್ಟಿಯಲ್ಲಿ ಹೆಸರು ಇಲ್ಲದ ಕಾರಣ ನಿರಾಸೆಗೊಳಗಾದ ಘಟನೆ ನಡೆಯಿತು.

ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾನೊಬ್ಬ ಜವಾಬ್ದಾರಿಯುತ ಮತದಾರನಾಗಿ ಕರ್ನಾಟಕದಲ್ಲಿ ನಡೆಯುವ ಪ್ರತಿ ಚುನಾವಣೆ ವೇಳೆಯೂ ಅಮೆರಿಕಾದಿಂದ ದಾವಣಗೆರೆಗೆ ಬಂದು ಮತ ಚಲಾಯಿಸುತ್ತಿದ್ದೇನೆ ಎಂದರು.

ಈ ಬಾರಿಯ ವಿಧಾನಸಭಾ ಚುನಾವಣೆಗೂ ಮತ ಚಲಾಯಿಸಲು ಕಳೆದ ನವೆಂಬರ್ ತಿಂಗಳಂದು ಮತದಾರರ ಪಟ್ಟಿಯಲ್ಲಿ ಹೆಸರು ಪರಿಶೀಲಿಸಿದ್ದೆ. ನನ್ನ ಹೆಸರು ಇತ್ತು. ನಂತರ ಜನವರಿಯಲ್ಲಿ ದಾವಣಗೆರೆಗೆ ಬರುವ ತಯಾರಿ ನಡೆಸಿ ಮತ್ತೊಮ್ಮೆ ಪಟ್ಟಿಯಲ್ಲಿ ಹೆಸರು ಚೆಕ್ ಮಾಡಿದಾಗಲೂ ಹೆಸರಿತ್ತು. ಆದರೆ ಇಂದು ಮತದಾನ ಮಾಡಲು ಬಂದಾಗ ಹೆಸರು ನಾಪತ್ತೆಯಾಗಿದೆ ಎಂದವರು ಬೇಸರ ವ್ಯಕ್ತಪಡಿಸಿದರು.

ವಾರಗಟ್ಟಲೆ ರಜೆ ಹಾಕಿ, ಸಾಕಷ್ಟು ಹಣ ಖರ್ಚು ಮಾಡಿ ಮತದಾನ ಮಾಡಲು ಬಂದಿದ್ದೆ. ಇಂದು ಬಂದು ಪರಿಶೀಲಿಸಿದಾಗ ಮತಗದಾರರ ಪಟ್ಟಿಯಲ್ಲಿ ಮತವೇ ಇಲ್ಲ ಎಂದು ಹೇಳುತ್ತಾರೆ.

ಚುನಾವಣಾಧಿಕಾರಿ ಕೇಳಿದಾಗ ಅವರೂ ಪರಿಶೀಲಿಸಿದ್ದಾರೆ. ಆಗಲೂ ಪ್ರಯೋಜನವಾಗಲಿಲ್ಲ. ಇದೀಗ ತೀವ್ರ ನಿರಾಸೆಯಿಂದ ಹಿಂದಿರುಗಬೇಕಾಗಿದೆ ಎಂದವರು ಹೇಳಿದ್ದಾರೆ.

## ಹೃದಯಪೂರ್ವಕ ಕೃತಜ್ಞತೆಗಳು




ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ದಕ್ಷಿಣ ವಿಧಾನಸಭಾ ಕ್ಷೇತ್ರದ **ಶ್ರೀ ಶಾಮನೂರು ಶಿವಶಂಕರಪ್ಪ** ಅವರಿಗೆ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಅವರಿಗೆ, ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ **ಶ್ರೀ ಹೆಚ್. ಆಂಜನೇಯ** ಅವರಿಗೆ, ಮಾಯಕೊಂಡ ವಿಧಾನಸಭಾ ಕ್ಷೇತ್ರದ **ಶ್ರೀ ಕೆ.ಎಸ್. ಬಸವಂತಪ್ಪ** ಅವರಿಗೆ ಹಾಗೂ ರಾಜ್ಯದ ಕಾಂಗ್ರೆಸ್ ಪಕ್ಷದ ಎಲ್ಲಾ ಅಭ್ಯರ್ಥಿಗಳ ಹಸ್ತದ ಗುರುತಿಗೆ

ಮತ ನೀಡಿದ ಮಾನ್ಯ ಮತದಾರ ಪ್ರಭುಗಳಿಗೂ ಮತ್ತು ಕಾಂಗ್ರೆಸ್ ಮುಖಂಡರುಗಳಿಗೂ, ಕಾರ್ಯಕರ್ತರಿಗೂ ಹಾಗೂ ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.



**ಕಣ್ಣಾಳ ಅಂಜಿನಪ್ಪ ಶಾಮನೂರು**
ಜಿಲ್ಲಾ ಕಾಂಗ್ರೆಸ್ ಮುಖಂಡರು
ಸಂಸ್ಥಾಪಕ ಅಧ್ಯಕ್ಷರು,
ಎಸ್. ಎಸ್. ಮಲ್ಲಿಕಾರ್ಜುನ ಯುವಶಕ್ತಿ ಬಳಗ (ರಿ.)
ಶಾಮನೂರು.

# ಹರಿಹರ : ಬಿರು ಮಳೆಗೆ ನೆಲಕ್ಕುರುಳಿದ ಮರಗಳು



ಹರಿಹರ, ಮೇ 10- ನಗರದಲ್ಲಿ ಸಂಜೆ ಧಾರಾಕಾರವಾಗಿ ಸುರಿದ ಮಳೆ ಗಾಳಿಗೆ ಹಲವಾರು ಬಡಾವಣೆಯಲ್ಲಿ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕೆ ಬಿದ್ದು ಸಾಕಷ್ಟು ಪ್ರಮಾಣದಲ್ಲಿ ಹಾನಿ ಸಂಭವಿಸಿದೆ.

ವಿವಿಧ ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಮರಗಳು ಬಿದ್ದು ಹಲವಾರು ಕಾರು ಹಾಗೂ ಬೈಕ್‌ಗಳಿಗೆ ಹಾನಿಯಾಗಿದೆ.

ಶೋಭಾ ಟಾಕೀಸ್ ರಸ್ತೆ, ಹಳೆ ಪಿ.ಬಿ.ರಸ್ತೆ, ಗಿರಿಯಮ್ಮ ಕಾಲೇಜು ಮುಂಭಾಗ, ಬಸ್ ನಿಲ್ದಾಣ ಹತ್ತಿರ, ಶಿವಮೊಗ್ಗ ರಸ್ತೆ ಮತ್ತು ವಿವಿಧ ಪ್ರಮುಖ ರಸ್ತೆಗಳ ಮಧ್ಯದಲ್ಲಿ ಬೃಹತ್ ಪ್ರಮಾಣದ ಮರಗಳು ಬಿದ್ದಿದ್ದರಿಂದ ವಾಹನಗಳ ಸಂಚಾರಕ್ಕೆ ಅಡಚಣೆ ಆಗಿತ್ತು. ತಡರಾತ್ರಿಯವರೆಗೆ ವಿದ್ಯುತ್ ಸಂಪರ್ಕವನ್ನು ಕಡಿತ ಗೊಳಿಸಲಾಗಿತ್ತು.

ನಗರದಲ್ಲಿ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದ್ದವು.

# ಡೀಸೆಲ್ ವಾಹನಗಳ ನಿಷೇಧ ಪ್ರಸ್ತಾವನೆ ಅಂಗೀಕರಿಸಿಲ್ಲ : ಕೇಂದ್ರ

ನವದೆಹಲಿ, ಮೇ 10 - 2027ರ ವೇಳೆಗೆ ಹತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯ ನಗರಗಳಲ್ಲಿ ನಾಲ್ಕು ಚಕ್ರಗಳ ಡೀಸೆಲ್ ವಾಹನಗಳನ್ನು ನಿಷೇಧಿಸುವ ಪ್ರಸ್ತಾವನೆ ಇನ್ನೂ ಅಂಗೀಕರಿಸಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮಾಜಿ ತೈಲ ಕಾರ್ಯದರ್ಶಿ ತರುಣ್ ಕಪೂರ್ ನೇತೃತ್ವದ ಸಮಿತಿಯು ಈ ಬಗ್ಗೆ ವರದಿ ಸಲ್ಲಿಸಿ, 2027ರ ವೇಳೆಗೆ ಎಲೆಕ್ಟ್ರಿಕ್ ಹಾಗೂ ಗ್ಯಾಸ್ ಇಂಧನಕ್ಕೆ ಪರಿವರ್ತನೆಯಾಗಬೇಕು ಎಂದು ತಿಳಿಸಿತ್ತು.

ಮುಂದಿನ ಹತ್ತು ವರ್ಷಗಳ ನಂತರ ಯಾವುದೇ ಡೀಸೆಲ್ ಬಸ್‌ಗಳನ್ನು ನಗರ ಪ್ರದೇಶಗಳಲ್ಲಿ ಖರೀದಿಸಬಾರದು ಎಂದು ಕಳೆದ ಫೆಬ್ರವರಿಯಲ್ಲಿ ವರದಿ ನೀಡಲಾಗಿತ್ತು.

## ಬಿಜೆಪಿಗೇ ಬಹುಮತ ಬೊಮ್ಮಾಯಿ ವಿಶ್ವಾಸ

ಬೆಂಗಳೂರು, ಮೇ 13 - ಚುನಾವಣೋತ್ತರ ಸಮೀಕ್ಷೆಗಳು ಶೇಕಡ 100ರಷ್ಟು ಸರಿಯಾಗಿ ಇರುವುದಿಲ್ಲ. ನೈಜ ಫಲಿತಾಂಶ ಬರುವಾಗ ಹೆಚ್ಚೂ ಕಡಿಮೆ ಆಗುತ್ತದೆ. ಈ ಬಾರಿ ಬಿಜೆಪಿಗೆ ಬಹುಮತ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಚುನಾವಣೋತ್ತರ ಸಮೀಕ್ಷೆಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸಿರುವ ಅವರು, ನಾವು ಸ್ಪಷ್ಟ ಬಹುಮತದಿಂದ ಗೆಲ್ಲಲಿದ್ದೇವೆ ಎಂಬ ಬೇರು ಮಟ್ಟದ ವರದಿಗಳಿವೆ. ಮೇ 13ಕ್ಕೆ ಫಲಿತಾಂಶ ಬರುವವರೆಗೆ ಕಾದು ನೋಡೋಣ ಎಂದರು.

## ಪಾಕ್ : ಖಾನ್ 8 ದಿನಗಳ ಕಾಲ ವಶಕ್ಕೆ

ಇಸ್ಲಾಮಾಬಾದ್, ಮೇ 10 – ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಲುಕಿ ಬಂಧಿತರಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರನ್ನು ನ್ಯಾಯಾಲಯ 8 ದಿನಗಳ ಕಾಲ ಎನ್.ಎ.ಬಿ. (ರಾಷ್ಟ್ರೀಯ ಉತ್ತರದಾಯಿತ್ವ ದಳ) ವಶಕ್ಕೆ ನೀಡಿದೆ. ಈ ನಡುವೆ, ಮತ್ತೊಂದು ಭ್ರಷ್ಟಾಚಾರ ಪ್ರಕರಣದಲ್ಲಿ ಖಾನ್ ವಿರುದ್ಧ ದೋಷಾರೋಪ ಮಾಡಲಾಗಿದೆ.

ಖಾನ್ ಬಂಧನದ ವಿರುದ್ಧ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಏಳು ಜನ ಸಾವನ್ನಪ್ಪಿದ್ದಾರೆ. ಮೂರು ಪ್ರಾಂತ್ಯಗಳಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಸೈನ್ಯವನ್ನು ನಿಯೋಜಿಸಲಾಗಿದೆ.





ಬಾಪೂಜಿ ವಿದ್ಯಾ ಸಂಸ್ಥೆ (ರಿ.)

**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು**

ಎಂ.ಎಸ್.ಬಿ. ಕಾಲೇಜ್ ಬಿಲ್ಡಿಂಗ್, ಎ.ವಿ.ಕೆ. ಕಾಲೇಜ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ-02.

**ADMISSION OPEN FOR 2023-24**
**I & II PUC SCIENCE (PCMB Only)**

ನಮ್ಮ ಕಾಲೇಜಿನ ವಿಶೇಷತೆಗಳು :

- ನಗರದ ಮಧ್ಯ ಭಾಗದಲ್ಲಿದ್ದು, ಸುಸಜ್ಜಿತವಾದ ಗ್ರಂಥಾಲಯ ಮತ್ತು ಪ್ರಯೋಗಾಲಯಗಳನ್ನು ಹೊಂದಿದೆ.
- Located in the heart of the city with fully furnished library and well equipped laboratories.
- ಅತೀ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುವುದು. ◆ Quality education in affordable fees.
- K-CET, NEET, JEE ಪರೀಕ್ಷಾ ತರಬೇತಿ ನೀಡಲಾಗುವುದು. ◆ K-CET, NEET, JEE exam coaching will be given.
- ಪ್ರತಿಭಾನ್ವಿತ, ಹಿರಿಯ ಹಾಗೂ ಅನುಭವಿ ಅಧ್ಯಾಪಕ ವೃಂದ. ◆ Experienced Scholarly and innovative teaching faculty.
- ದಾವಣಗೆರೆ ನಗರದ ಅತ್ಯುತ್ತಮ ಹತ್ತು ಕಾಲೇಜುಗಳಲ್ಲೊಂದು. ◆ One among the top ten PU colleges in Davangere.
- ಕನ್ನಡ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳ ಭಾಷಾ ತೊಡಕಿನ ನಿವಾರಣೆಗಾಗಿ ವಿಶೇಷ ಕಾಳಜಿಯೊಂದಿಗೆ ಬೋಧನೆ.
- Intensive follow up for the students who come from kannada medium to overcome their language barrier.
- ಪ್ರತಿಯೊಬ್ಬ ವಿದ್ಯಾರ್ಥಿಯ ವೈಯಕ್ತಿಕ ಕಾಳಜಿ, ಪರಿಹಾರ ಬೋಧನೆ, ಗುಂಪು ಚರ್ಚೆ, ಆಪ್ತ ಸಮಾಲೋಚನೆ ಹಾಗೂ ಮಾರ್ಗದರ್ಶನ.
- Individual attention, Remedial teaching Group discussion, Special coaching counselling and mentoring.
- ವ್ಯಕ್ತಿತ್ವ ವಿಕಸನ ಹಾಗೂ ಸ್ಪೋಕನ್ ಇಂಗ್ಲೀಷ್ ತರಬೇತಿ.
- Regular Personality Development and Spoken English Training sessions.
- ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ಪ್ರತಿ ತಿಂಗಳು ಆಪ್ತ ಸಮಾಲೋಚನೆ.
- One to one parent interaction and parent teacher meeting
- ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ.
- Motivation towards, Academic Cultural and sports activities.
- ನಿಯಮಿತ ವಾರಾಂತ್ಯ ಕಿರುಪರೀಕ್ಷೆಗಳು, ಮಾಸಿಕ ಕಿರು ಪರೀಕ್ಷೆಗಳು, ಮಧ್ಯವಾರ್ಷಿಕ ಪರೀಕ್ಷೆ, ವಿಷಯವಾರು ಸರಣಿ ಪರೀಕ್ಷೆಗಳು ಹಾಗೂ ಪೂರ್ವಸಿದ್ಧತಾ ಸರಣಿ ಪರೀಕ್ಷೆಗಳು
- Regular Weekend, monthly test in each term in addition to Mid-term, Subject series exams and preparatory series exams.
- K-CET, NEET, JEE ವಾರಾಂತ ಸರಣಿ ಪರೀಕ್ಷೆಗಳು. ◆ K-CET, NEET, JEE Weekend Series exams.
- ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ. ◆ Separate Hostel accommodation for boys and girls

ಸಹಿ/– ಡಾ. ಶಾಮನೂರು ಶಿವಶಂಕರಪ್ಪ, ಗೌರವ ಕಾರ್ಯದರ್ಶಿಗಳು, ಬಾ.ವಿ.ಸಂ., ದಾವಣಗೆರೆ.
ಸಹಿ/– ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಜಂಟಿ ಕಾರ್ಯದರ್ಶಿಗಳು, ಬಾ.ವಿ.ಸಂ., ದಾವಣಗೆರೆ.
ಸಹಿ/– ಪ್ರೊ. ಎಂ.ಪಿ. ರುದ್ರಪ್ಪ, ಪ್ರಾಚಾರ್ಯರು, ಎಸ್‌ಪಿಎಸ್‌ಎಸ್ ಪಿಯು ಸೈನ್ಸ್ ಕಾಲೇಜು, ದಾವಣಗೆರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
08192-250571, 9886497330, 9844463860, 9242790163








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte